ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಆ್ಯಷಸ್ ಸರಣಿಯ 2ನೇ ಟೆಸ್ಟ್ ಪಂದ್ಯದಲ್ಲಿ ಅನುಭವಿ ಬ್ಯಾಟರ್ ಜೋ ರೂಟ್ ಕೊನೆಗೂ ಆಸ್ಟ್ರೇಲಿಯಾದ ನೆಲದಲ್ಲಿ ಮೊದಲ ಬಾರಿ ಟೆಸ್ಟ್ ಶತಕ ಗಳಿಸಿದರು.

05 ಡಿಸೆಂಬರ್ 2025 ಶುಕ್ರವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 263 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಈ ವಾರ ಯಾವೆಲ್ಲಾ ಸಿನಿಮಾಗಳು ಬಿಡುಗಡೆ ಆಗಿದೆ » 2



ಸಾಲ ಪಡೆದ ರೈತರು ವಿಮೆ ಮಾಡಿಸಬೇಕು » 3



ಶಾಸಕ ಸ್ವರೂಪ್, ರಸ್ತೆ ಕಾಮಗಾರಿ ಬಗ್ಗೆ ಅಪಪ್ರಚಾರ » 4

## ವಿವಾದಿತ ವಿಧೇಯಕಗಳಿಗೆ ಸಂಪುಟ ಅಸ್ತು

### ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲು ತಯಾರಿ | 8 ಮಹತ್ವದ ಕಾಯ್ದೆಗೆ ಒಪ್ಪಿಗೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ದ್ವೇಷ ಭಾಷಣಗಳಿಗೆ ಕಡಿವಾಣ ಹಾಕಲು ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕ ಕಾಯ್ದೆ, ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ತಿದ್ದುಪಡಿ ಕಾಯ್ದೆ, ಸಾಮಾಜಿಕ ಬಹಿಷ್ಕಾರ ನಿಷೇಧ ವಿಧೇಯಕ ಜಾರಿಗೆ ತರಲು ಗುರುವಾರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಟ್ಟು 8 ಮಹತ್ವದ ವಿಧೇಯಕಕ್ಕೆ ಒಪ್ಪಿಗೆ ನೀಡಲಾಗಿದೆ. ಬೆಳಗಾವಿಯಲ್ಲಿ ಆರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ವಿವಾದಿತ ಮಸೂದೆಗಳನ್ನು ಮಂಡಿಸಲು ತಯಾರಿಯಾಗಿದ್ದು, ಈ ಕಾಯ್ದೆಯ ವಿರುದ್ಧ ಪ್ರತಿಭಟನೆ ಭುಗಿಲೇಳುವ ನಿರೀಕ್ಷೆ ಇದೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್ ಅವರು, ದ್ವೇಷ ಭಾಷಣ ಪ್ರತಿಬಂಧಕ ವಿಧೇಯಕ, ಬಯಲುಸೀಮೆ ತಿದ್ದುಪಡಿ ವಿಧೇಯಕ, ಮಲೆನಾಡು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ,

» ನಾಲ್ಕನೇ ಪುಟದಲ್ಲಿ



#### 73.22 ಕೋಟಿ ರೂ. ಅನುಮೋದನೆ

ಅರಸೀಕೆರೆ ತಾಲ್ಲೂಕಿನ ಬಾಣವಾರ ಹಾಗು ಗಂಡಸಿ ಬ್ಲಾಕ್‌ನ 530 ಜನವಸತಿಗಳಿಗೆ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಮುಂದಿನ 5 ವರ್ಷಗಳ ಕಾರ್ಯಾ ಚರಣೆ ಹಾಗು ನಿರ್ವಹಣೆಗೆ 73.22 ಕೋಟಿ ರೂ. ನೀಡಲು ಸಂಪುಟದಲ್ಲಿ ಆಡಳಿತಾತ್ಮಕ ಅನು ಮೋದನೆ ದೊರೆತಿದೆ. ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕಿನ ಗೂಡೇಹೊಸಹಳ್ಳಿ ಬಳಿ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ಮತ್ತು ನಾಗಮಂಗಲ ತಾಲ್ಲೂಕು ಹಾಗು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕುಗಳ ಕೆರೆ ತುಂಬಿಸುವ (ಹಂತ-2) 67 ಕೋಟಿ ರೂ. ಅಂದಾಜು ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

#### ಜಿಲ್ಲಾ ಒಕ್ಕಲಿಗರ ಸಂಘಕ್ಕೆ ಸಿ.ಎ. ನಿವೇಶನ

ಸಚಿವ ಸಂಪುಟ ಸಭೆಯಲ್ಲಿ ಹಾಸನ ಜಿಲ್ಲಾ ಒಕ್ಕಲಿಗರ ಸಂಘಕ್ಕೆ ಎಸ್.ಎಂ.ಕೆ.ನಗರ ವಸತಿ ಬಡಾವಣೆಯ ಸಿ.ಎ. ನಿವೇಶನ ಸಂ: 4/7 ಮತ್ತು 4/9 ರಲ್ಲಿನ ನಾಗರಿಕ ಸೌಲಭ್ಯ ನಿವೇಶನದ 3964 ಚ.ಮೀವುಳ್ಳ (42652 ಚ.ಅಡಿ) ಸಿ.ಎ. ನಿವೇಶನವನ್ನು ಗ್ರಾಮೀಣ ವಿದ್ಯಾರ್ಥಿ ನಿಲಯ ಮತ್ತು ಸಮುದಾಯ ಭವನ ಉದ್ದೇಶಕ್ಕಾಗಿ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ 3,76,61,716 ರೂ. ನಿಗದಿಪಡಿಸಿ ಹಂಚಿಕೆ ಮಾಡಲಾಗಿದೆ. ಜಿಲ್ಲಾ ಒಕ್ಕಲಿಗರ ಸಂಘ ಮಂಜೂರಾತಿ ಕೋರಿ ಸಲ್ಲಿಸಿದ ಅರ್ಜಿಯೊಂದಿಗೆ 37,66,236 ರೂ. ಪಾವತಿಸಿದೆ. ಬಾಕಿ ಮೊತ್ತ 3,38,95,480ರೂ. ಪಾವತಿಸಬೇಕಾಗಿದೆ. ಈ ಬಾಕಿ ಮೊತ್ತಕ್ಕೆ ವಿನಾಯಿತಿ ನೀಡಲು ಸಚಿವ ಸಂಪುಟ ನಿರ್ಧರಿಸಿದೆ.

## ನಿತಿನ್ ಗಡ್ಕರಿ ಭೇಟಿಯಾದ ಹೆಚ್.ಡಿ.ಕೆ, ರೇವಣ್ಣ

• ಪ್ರಜೋದಯ ವರದಿ



**ಹಾಸನ:** ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮತ್ತು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ದೆಹಲಿಯಲ್ಲಿ ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಗುರುವಾರ ಭೇಟಿಯಾಗಿ ನಗರದ ಹೊರ ವಲಯದ ವರ್ತುಲ ರಸ್ತೆಗೆ ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದರು.

ಇದೇ ವೇಳೆ 2030ರ ಮಹಾ ಮಸ್ತಕಾಭಿಷೇಕ ಹಿನ್ನೆಲೆ ಹಾಸನ ವಿಮಾನ ನಿಲ್ದಾಣ ಕಾಮಗಾರಿಯನ್ನು ಪೂರ್ಣಗೊಳಿಸಿ, ವಿಮಾನ ಹಾರಾಟವನ್ನು ಪ್ರಾರಂಭಿಸಲು ಅತಿ ಜರೂರಾಗಿ ಅಧಿಕಾರಿಗಳಿಗೆ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗುವುದೆಂದು ಸಚಿವ ಗಡ್ಕರಿ ಅವರು ಭರವಸೆ ನೀಡಿದರು. ಸಂಸದ ಮಲ್ಲೇಶ್ ಬಾಬು ಇದ್ದರು.

## ಡಿ.21 ರಂದು ಅರಕಲಗೂಡು ತಾಲ್ಲೂಕಿನಾದ್ಯಂತ ಪಲ್ಸ್ ಪೋಲಿಯೋ

• ಪ್ರಜೋದಯ ವರದಿ

**ಅರಕಲಗೂಡು :** ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಡಿ.21 ರಂದು ತಾಲೂಕಿನಾದ್ಯಂತ ಹಮ್ಮಿಕೊಳ್ಳಲಾಗಿದ್ದು, ಪೋಷಕರು 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಲಿಯೋ ಹನಿ ಹಾಕಿಸಿ ಪೋಲಿಯೋ ಮುಕ್ತ ಗೊಳಿಸಬೇಕೆಂದು ತಹಸೀಲ್ದಾರ್ ಕೆ.ಸಿ.ಸೌಮ್ಯ ತಿಳಿಸಿದರು.

ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವ ಭಾವಿಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಪೋಲೀಯೋ ಲಸಿಕೆ ಹಾಕಿಸಿದ್ದರೂ ಕೂಡ ಕಡ್ಡಾಯವಾಗಿ ಸೊನ್ನೆಯಿಂದ 5ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಲಸಿಕೆ ಹಾಕಿಸಬೇಕಿದೆ. ಯಾರೂ ಕೂಡ ನಿರ್ಲಕ್ಷ್ಯತೆ ವಹಿಸಬಾರದಾಗಿದೆ ಅವರು ಮನವಿ ಮಾಡಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಪುಷ್ಪಲತಾ ಅವರು ಮಾತನಾಡಿ, 5ವರ್ಷದೊಳಗಿನ ಒಟ್ಟು 10,157ಮಕ್ಕಳು, ವಲಸಿಗ ಕಾರ್ಮಿಕರ 150ಕ್ಕೂ ಅಧಿಕ ಮಕ್ಕಳನ್ನು ಸಹ ಗುರುತಿಸಲಾಗಿದೆ. ಒಟ್ಟು 103 ಪೋಲೀಯೋ ಬೂತ್, 412ಮಂದಿ ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆಂದರು.

## ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಗೊಂದಲಕ್ಕೆ ತಾತ್ಕಾಲಿಕ ವಿರಾಮ

• ಪ್ರಜೋದಯ ವರದಿ

**ಹಾಸನ:** ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿ ಅಧಿಕಾರ ಹಿಡಿಯಲು ಎರಡು ಬಣಗಳ ನಡುವೆ ನಡೆಯುತ್ತಿದ್ದ ಗೊಂದಲಗಳಿಗೆ ಜಿಲ್ಲಾ ನ್ಯಾಯಾಲಯ ತಾತ್ಕಾಲಿಕ ವಿರಾಮ ಹಾಕಿದೆ.

ನ್ಯಾಯಾಲಯವು ಸಂಘದ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ, ಕಾರ್ಯದರ್ಶಿ ಜಗದೀಶ್ ಚೌಡುವಳ್ಳಿ ಮತ್ತು ಖಜಾಂಚಿ ಪಾರ್ಶ್ವನಾಥ್ ಅವರು ಕಾನೂನು ಬದ್ಧವಾಗಿ ಅಧಿಕಾರದಲ್ಲಿ ಮುಂದುವರೆಯಲಿದ್ದಾರೆ. ಪ್ರತಿವಾದಿಗಗಳು ಸಂಘದ ಆಡಳಿತ ಮತ್ತು ದಿನನಿತ್ಯ ಕೆಲಸಗಳಿಗೆ ಅಂತಿಮ ತೀರ್ಪು ಬರುವವರೆಗೂ ಹಸ್ತಕ್ಷೇಪ ಮಾಡಬಾರದೆಂದು ನ್ಯಾಯಾಲಯ ಆದೇಶ ಹೊರಡಿಸಿದೆ.

ಸಂಸ್ಥೆಯೊಳಗೆ ಉಂಟಾಗಿರುವ ಗೊಂದಲದಿಂದ ಶೈಕ್ಷಣಿಕ ಕಾರ್ಯಕ್ಕೆ ವ್ಯತ್ಯಯವಾಗುವ ಸಾಧ್ಯತೆಯನ್ನು ಗಮನಿಸಿ, ಅರ್ಜಿದಾರರ ಪರ ತಡೆ ಆದೇಶ ಅಗತ್ಯವೆಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಹೀಗಾಗಿ ಎರಡು ಬಣಗಳ ನಡುವೆ ನಡೆಯುತ್ತಿದ್ದ ಗುದ್ದಾಟಕ್ಕೆ ತಾತ್ಕಾಲಿಕ ವಿರಾಮ ಬಿದ್ದಿದ್ದು, ಅಂತಿಮ ತೀರ್ಪು ಯಾರ ಪರ ಬರಲಿದೆ ಎಂಬುದು ಕುತೂಹಲ ಮೂಡಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸಂಸ್ಥೆಯ ಅಧ್ಯಕ್ಷ ಆರ್.ಟಿ.ದೇವೇಗೌಡ ಹಾಗು ಕಾರ್ಯದರ್ಶಿ ಜಗದೀಶ್ ಚೌಡುವಳ್ಳಿ ಅವರು, ನ್ಯಾಯಾಲಯದ ತೀರ್ಪನ್ನು ನಾವು ಗೌರವ ಪೂರ್ವಕವಾಗಿ ಸ್ವಾಗತಿಸುತ್ತೇವೆ. ನಮ್ಮ ಪರ ತೀರ್ಪು ಬಂದಿದೆ ಎನ್ನುವುದಕ್ಕಿಂತ ಸಂಸ್ಥೆಯ ಹಿತ ದೃಷ್ಟಿಯಿಂದ ಎಲ್ಲಾ ನಿರ್ದೇಶಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಸ್ಥೆ ಮುನ್ನಡೆಸಿಕೊಂಡು ಹೋಗಲು ಕಟಿಬದ್ದರಾಗಿದ್ದೇವೆಂದು ಹೇಳಿದರು.



## ದೇಶದ ಜನಸಂಖ್ಯೆಗೆ ತಕ್ಕಂತೆ ಕ್ರೀಡಾ ಕ್ಷೇತ್ರದ ಸಾಧನೆ ಸಾಗಲಿ

### ಆದಿಚುಂಚನಗಿರಿ 28ನೇ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ

• ಪ್ರಜೋದಯ ವರದಿ

**ಹಾಸನ:** ವಿಶ್ವದಲ್ಲೇ ಹೆಚ್ಚು ಮಾನವ ಸಂಪನ್ಮೂಲ ಭಾರತದಲ್ಲಿದ್ದರೂ, ಕ್ರೀಡಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಲಾಗುತ್ತಿಲ್ಲ. ಇನ್ಮುಂದೆ ಹೆಚ್ಚಾಗಿ ಕ್ರೀಡಾಭ್ಯಾಸದಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಾಧನೆ ಮಾಡಬೇಕೆಂದುಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರು ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಆದಿಚುಂಚನಗಿರಿ 28ನೇ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಭಾರತ ವಿವಿಧ ಕ್ಷೇತ್ರಗಳಲ್ಲಿ ಅಂತರ‍್ರಾಷ್ಟ್ರೀಯ ಮಟ್ಟದ ಸಾಧನೆ ಮಾಡಿದೆ. ಆದರೆ, ಕ್ರೀಡಾ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಲು ಆಗಿಲ್ಲ. ಕ್ರೀಡೆಯನ್ನು ವೀಕ್ಷಿಸುವ, ಪ್ರೋತ್ಸಾಹಿಸುವ ಜೊತೆಗೆ ಅಭ್ಯಾಸ ಮಾಡಿ ಭಾಗವಹಿಸುವಂತಾಗಬೇಕೆಂದರು.

ಬೆಳೆಯುವ ಮಕ್ಕಳಿಗೆ ಕ್ರೀಡೆ ಅತಿ ಮುಖ್ಯ. ದೇಹದ ಆರೋಗ್ಯ, ಮನಸ್ಸು ಸುಸ್ಥಿರವಾಗಿರಬೇಕಾದರೆ ದೇಹ ಸದೃಢವಾಗಿರಬೇಕು. ಮನುಷ್ಯ ನೂರು ವರ್ಷ ಬದುಕು

» ನಾಲ್ಕನೇ ಪುಟದಲ್ಲಿ



" ಶ್ರೀ ಕ್ಷೇತ್ರವು ಶೈಕ್ಷಣಿಕ, ಸಾಂಸ್ಕೃತಿಕ, ಸಂಗೀತ, ಆಧ್ಯಾತ್ಮಿಕತೆಗೆ ಉತ್ತೇಜನ ನೀಡುವ ಜೊತೆಗೆ ಪ್ರತಿ ವರ್ಷ ಕ್ರೀಡಾಕೂಟ ಆಯೋಜನೆ ಮಾಡುವ ಮೂಲಕ ಕ್ರೀಡೆಗೂ ಉತ್ತೇಜನ ನೀಡುತ್ತಿದೆ. ಒದಿನೊಂದಿಗೆ ಕ್ರೀಡೆಯಲ್ಲೂ ಸಾಧನೆ ಮಾಡಬೇಕೆಂಬುದು ಮಠದ ಉದ್ದೇಶ. ಅದಕ್ಕೆ ಪೂರಕವಾಗಿ ನಮ್ಮ ಸಂಸ್ಥೆಗಳ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುತ್ತಿದ್ದಾರೆ. ಈ ಮೂಲಕ ನಮ್ಮ ಸ್ವಾಮೀಜಿ ಅವರು ಕಂಡ ಕನಸು ನನಸಾಗಿದೆ.

- ಶ್ರೀ ಶಂಭುನಾಥ ಸ್ವಾಮೀಜಿ

#### ಕ್ರೀಡೆಗೆ ಹೆಚ್ಚಿನ ಅನುದಾನ ನೀಡಬೇಕು: ಸಿ.ಎನ್.ಬಾಲಕೃಷ್ಣ

ಸರ್ಕಾರಕ್ಕಿಂತಲೂ ಮಿಗಿಲಾಗಿ ಶ್ರೀ ಮಠವು ಬೃಹತ್ ಕ್ರೀಡಾಕೂಟ ಆಯೋಜನೆ ಮಾಡುತ್ತಿರುವುದು ಸ್ವಾಗತಾರ್ಹ. ಮಠವು 1.60 ಲಕ್ಷ ಮಕ್ಕಳಿಗೆ ಜಾತಿ, ಧರ್ಮ, ಬೇಧವಿಲ್ಲದೆ ಶಿಕ್ಷಣ ನೀಡುತ್ತಿರುವುದರ ಜೊತೆಗೆ ಆರೋಗ್ಯ, ಕ್ರೀಡೆಗೂ ಒತ್ತು ನೀಡಿರುವುದು ಪ್ರಶಂಸನೀಯ. ಸರ್ಕಾರಗಳು ಕ್ರೀಡೆಗೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚನೆ ನೀಡಿ ಕ್ರೀಡೆ ಹಾಗು ಕ್ರೀಡಾಪಟುಗಳಿಗೆ ಹೆಚ್ಚಿನ ಅನುದಾನ, ಪ್ರೋತ್ಸಾಹ ನೀಡಬೇಕೆಂದು ಶಾಸಕ ಸಿ. ಎನ್.ಬಾಲಕೃಷ್ಣ ಅವರು ಒತ್ತಾಯಿಸಿದರು.

## ಬೇಲೂರು-ಹಾಸನ ಹೆದ್ದಾರಿ ಪರಿಷ್ಕೃತ ಮಂಜೂರಾತಿ ನೀಡಿ

### ಮಂಜರಾಬಾದ್ ಕೋಟೆ ಸಂರಕ್ಷಣೆ ನೆರವಿಗೆ ಕೇಂದ್ರ ಸಚಿವರಲ್ಲಿ ಶ್ರೇಯಸ್ ಕೋರಿಕೆ

• ಪ್ರಜೋದಯ ವರದಿ

**ಹಾಸನ:** ಸಂಸದ ಶ್ರೇಯಸ್ ಪಟೇಲ್ ಅವರು ಕೇಂದ್ರ ರಾಷ್ಟ್ರೀಯ ಹೆದ್ದಾರಿ ಮತ್ತು ಭೂ ಸಾರಿಗೆ ಸಚಿ ನಿತಿನ್ ಗಡ್ಕರಿ ಅವರನ್ನು ನವದೆಹಲಿಯಲ್ಲಿ ಭೇಟಿಯಾಗಿ ಬೇಲೂರು-ಹಾಸನ ರಾಷ್ಟ್ರೀಯ ಹೆದ್ದಾರಿ-373ರ ಪರಿಷ್ಕೃತ ಅಂದಾಜು ವೆಚ್ಚಕ್ಕೆ ಮಂಜೂರಾತಿ ನೀಡಬೇಕೆಂದು ಮನವಿ ಮಾಡಿದರು.

2022-23ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಕಾಮಗಾರಿ ಗುತ್ತಿಗೆ ನೀಡಲಾಗಿದ್ದು, ಒಪ್ಪಂದ ಕೈಗೊಳ್ಳಲಾಗಿದೆ. ಪರಿಷ್ಕೃತ ವೆಚ್ಚ ಅಂದಾಜು (ಆರ್‌ಸಿಇ) ಮಂಜೂರಾಗದ ಕಾರಣ ಯೋಜನೆ ಬಾಕಿ ಉಳಿದಿದೆ. ಪ್ರಸ್ತುತ ಆರ್‌ಸಿಇ ಪ್ರಸ್ತಾವನೆ ಬೆಂಗಳೂರು ಪ್ರಾದೇಶಿಕ ಕಚೇರಿಯ ಮಟ್ಟದಲ್ಲಿ ಪರಿಶೀಲನೆಗಾಗಿ ಬಾಕಿ ಉಳಿದಿದೆ. ಈ ಆಡಳಿತಾತ್ಮಕ ವಿಳಂಬದಿಂದಾಗಿ ಕೆಲಸ ಪ್ರಾರಂಭಿಸಲು ಅಗತ್ಯವಾದ ನೇಮಕ ದಿನಾಂಕ ಘೋಷಣೆಯಾಗದೇ ಗುತ್ತಿಗೆದಾರರು ಕಾರ್ಯಾರಂಭಿಸಲು ಸಾಧ್ಯವಾಗುತ್ತಿಲ್ಲವೆಂದು ಗಮನಕ್ಕೆ ತಂದರು.

ಈ ರಸ್ತೆ ಹಾಸನ ಜಿಲ್ಲೆಯ ಅತ್ಯಂತ ಪ್ರಮುಖ ಸಂಚಾರ ಮಾರ್ಗಗಳಲ್ಲಿ ಒಂದಾಗಿದ್ದು, ಸ್ಥಳೀಯ ಪ್ರಯಾಣಿಕರು, ಪ್ರವಾಸಿಗರು, ಕೃಷಿಕರು ಹಾಗು ಅಂತರ್ ರಾಜ್ಯ ವಾಹನ ಸವಾರರು ವ್ಯಾಪಕವಾಗಿ ಬಳಸುವ ಹೆದ್ದಾರಿಯಾಗಿದೆ. ನಿರಂತರ ಮಳೆ ಹಾಗು ಭಾರೀ ವಾಹನ ಸಂಚಾರದಿಂದ ರಸ್ತೆಯ ಸ್ಥಿತಿ ಹದಗೆಟ್ಟಿದ್ದು, ತೊಂದರೆ ಅನುಭವಿಸುತ್ತಿದ್ದಾರೆ. ಸಾರ್ವಜನಿಕ ಸುರಕ್ಷತೆಯ ಬಗ್ಗೆ ಚಿಂತೆ ಹೆಚ್ಚಿದೆ. ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ತ್ವರಿತಗತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

**ಗಜೇಂದ್ರ ಸಿಂಗ್ ಭೇಟಿ**

ಕೇಂದ್ರ ಸಂಸ್ಕೃತಿ ಇಲಾಖೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು ಭೇಟಿಯಾಗಿ ಸಕಲೇಶಪುರ ತಾಲ್ಲೂಕಿನ ಮಂಜರಾಬಾದ್ ಕೋಟೆ ಸಂರಕ್ಷಣೆಗೆ ಅಗತ್ಯ ನೆರವು ನೀಡುವಂತೆ ಮನವಿ ಸಲ್ಲಿಸಿದರು.

ಟಿಪ್ಪು ಸುಲ್ತಾನ್ ಕಾಲದಲ್ಲಿ ನಿರ್ಮಿಸಲ್ಪಟ್ಟ ನಕ್ಷತ್ರಾಕಾರದ ಕೋಟೆಗೆ ಹಾನಿಯಾಗಿದೆ. ಉತ್ತರ ಭಾಗದ ಗೋಡೆ, ಇಟ್ಟಿಗೆ ಮತ್ತು ಕಲ್ಲಿನ ಗೋಡೆಗಳ ದುರಸ್ತಿ, ಪ್ರವೇಶ ದ್ವಾರಗಳ ರಿಪೇರಿ, ಪ್ರವಾಸಿಗರಿಗೆ ಅಗತ್ಯ ಸೌಕರ್ಯ ಕಲ್ಪಿಸಬೇಕಿದೆ. ತುರ್ತು ಸಂರಕ್ಷಣಾ ಕಾಮಗಾರಿಗಳಿಗೆ 30 ಲಕ್ಷ ರೂ. ಹಾಗು ಐದು ವರ್ಷದ ಸಮಗ್ರ ಸಂರಕ್ಷಣಾ ಯೋಜನೆಗೆ 6.50 ಕೋ. ರೂ., ಪ್ರವಾಸಿಗರಿಗೆ ಸೌಲಭ್ಯ ಕಲ್ಪಿಸುವ ಕಾಮಗಾರಿಗೆ 80 ಲಕ್ಷ ರೂ. ಸೇರಿ ಒಟ್ಟು 7.60 ಕೋ.ರೂ. ಬಿಡುಗಡೆ ಮಾಡಬೇಕೆಂದು ಮನವಿ ಸಲ್ಲಿಸಿದರು.



## ಕರ್ನಾಟಕದಲ್ಲಿ 2,781 ಕೋ.ರೂ. ಟೋಲ್ ಸಂಗ್ರಹ

• ಪ್ರಜೋದಯ ವರದಿ

**ನವದೆಹಲಿ:**; ಕರ್ನಾಟಕದ ರಾಷ್ಟ್ರೀಯ ಹೆದ್ದಾರಿಗಳಲ್ಲಿ 66 ಟೋಲ್ ಪ್ಲಾಜಾಗಳ ಮೂಲಕ 202526ನೇ ಸಾಲಿನಲ್ಲಿ ಇಲ್ಲಿಯವರೆಗೆ 2,781 ಕೋ.ರೂ. ಶುಲ್ಕ ಸಂಗ್ರಹಿಸಲಾಗಿದೆ ಎಂದು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಸಂಸದರಾದ ಜಿ. ಕುಮಾರ ನಾಯಕ ಪ್ರಶ್ನೆಗಳಿಗೆ ಉತ್ತರ ನೀಡಿರುವ ಸಚಿವರು, 10 ವರ್ಷಗಳಲ್ಲಿ ಸಂಗ್ರಹಿಸಿದ ರಸ್ತೆ ಶುಲ್ಕದ ವಿವರಗಳನ್ನು ನೀಡಿದ್ದಾರೆ. 2014-15ರಲ್ಲಿ 1,213 ಕೋ.ರೂ. ಸಂಗ್ರಹವಾಗಿದ್ದರೆ, 2024-25ರಲ್ಲಿ 4,320 ಕೋಟಿ ಸಂಗ್ರಹಿಸಲಾಗಿದೆ. ಟೋಲ್ ಶುಲ್ಕ ಸಂಗ್ರಹ ಪ್ರಮಾಣ ದಶಕದಲ್ಲೇ ಮೂರು ಪಟ್ಟು ಹೆಚ್ಚಾಗಿದೆ ಎಂದರು.



## ಪತ್ರಕರ್ತರ ಸಂಘದಿಂದ ಜಿಲ್ಲಾಧಿಕಾರಿ ಭೇಟಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳು ಗುರುವಾರ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರನ್ನು ಭೇಟಿ ಮಾಡಿ ಪುಸ್ತಕ ನೀಡಿ ಅಭಿನಂದಿಸಿದರು.

ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ, ಉಪಾಧ್ಯಕ್ಷ ಎನ್.ನಂಜುಂಡೇಗೌಡ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಪಿ.ಎಸ್.ಪ್ರಮೋದ್, ಹಿರಿಯ ಪತ್ರಕರ್ತರಾದ ಬಿ.ಆರ್.ಉದಯಕುಮಾರ್, ಚೌಡಳ್ಳಿ ಜಗದೀಶ್, ಅತೀಖುರ್ ರೆಹಮಾನ್, ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಕಾರ್ಯದಶಿಗಳಾದ ಬಿ.ಆರ್.ಬೊಮ್ಮೇಗೌಡ, ಕೆ.ಎಂ.ಹರೀಶ್, ಕುಶ್ವಂತ್, ಖಜಾಂಚಿ ಪ್ರಕಾಶ್ ಬೆಳವಾಡಿ ಹಾಗು ಕಾರ್ಯಕಾರಿ ಸಮಿತಿ ಸದಸ್ಯರಿದ್ದರು.

## ಜೋಳ ಖರೀದಿ ಕೇಂದ್ರ ತೆರೆಯಲು ಆಗ್ರಹ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ 1 ಲಕ್ಷಕ್ಕೂ ಹೆಚ್ಚು ರೈತರು ಮೆಕ್ಕೆಜೋಳ ಬೆಳೆದಿದ್ದರೂ, ಕೇವಲ 4500 ರೈತರಿಂದ ಮಾತ್ರ ಜೋಳ ಖರೀದಿ ಮಾಡುವುದಾಗಿ ಹೇಳಲಾಗುತ್ತಿದೆ.ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೂಡಲೇ ಖರೀದಿ ಕೇಂದ್ರ ತೆರೆದು ಎಲ್ಲಾ ಜೋಳ ಖರೀದಿ ಮಾಡಬೇಕೆಂದು ರಾಜ್ಯ ರೈತ ಸಂಘ-ಹಸಿರು ಸೇನೆ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ ಅವರು ಒತ್ತಾಯಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ಜಿಲ್ಲಾಧಿಕಾರಿ ಕಚೇರಿ ಎದುರು ಹಗಲು-ರಾತ್ರಿ ಚಳುವಳಿ ಮಾಡಿದಾಗ ರೈತರಿಂದ 30 ಸಾವಿರ ಮೆಟ್ರಿಕ್ ಟನ್ ಮೆಕ್ಕೆಜೋಳ ಖರೀದಿ ಮಾಡುವುದಾಗಿ ಭರವಸೆ ನೀಡಿದ್ದರು. ಆದರೀಗ ಕೇವಲ 10 ಸಾವಿರ ಮೆಟ್ರಿಕ್ ಟನ್ ಮಾತ್ರ ಖರೀದಿ ಮಾಡಲು ಮುಂದಾಗಿ ದ್ದಾರೆ. ಜಿಲ್ಲಾಧಿಕಾರಿ ಎದುರಿಗೆ ಒಬ್ಬ ರೈತರಿಂದ 50 ಕ್ವಿಂಟಾಲ್ ಮೆಕ್ಕೆಜೋಳ ಖರೀದಿ ಮಾಡುವುದಾಗಿ ಅಧಿಕಾರಿಗಳು ಹೇಳಿ, ಈಗ ಕೇವಲ 20 ಕ್ವಿಂಟಾಲ್ ಮಾತ್ರ ಖರೀದಿ ಮಾಡಲಾಗುವುದೆಂದು ಹೇಳುತ್ತಿದ್ದಾರೆಂದು ದೂರಿದರು.

ಜಿಲ್ಲೆಯಲ್ಲಿ ಸುಮಾರು 12 ಸಾವಿರ ರೈತರು ಜೋಳದ ಬಿಳಿ ಸುಳಿ ರೋಗದಿಂದ ಇಳುವರಿಯಲ್ಲಿ ನಷ್ಟವಾಗಿದೆ. ಎಲ್ಲಾ ರೈತರಿಗೆ ಸೂಕ್ತ ಪರಿಹಾರ ಕೊಡಬೇಕು. ಇಲ್ಲದಿದ್ದರೆ ಮತ್ತೆ ಪ್ರತಿಭಟನೆ ಆರಂಭಿಸುವುದಾಗಿ ಎಚ್ಚರಿಕೆ ನೀಡಿದ ಅವರು, ಬೇರೆ ಜಿಲ್ಲೆಗಳಿಗೆ ಮೆಕ್ಕೆಜೋಳ ನಷ್ಟಕ್ಕೆ 16 ಕೋ.ರೂ. ವರೆಗೂ ಪರಿಹಾರಕ್ಕೆ ನೀಡಿರುವ ಸರ್ಕಾರ ನಮ್ಮ ಜಿಲ್ಲೆಗೆ ಕೇವಲ 2.5 ಕೋಟಿ ರೂ. ನೀಡುವ ಮೂಲಕ ತಾರತಮ್ಯ ಮಾಡಲಾಗಿದೆ. ಸೂಕ್ತ ಪರಿಹಾರ ನೀಡದಿದ್ದರೆ ಸಂಬಂಧಪಟ್ಟ ಇಲಾಖೆಗಳ ಎದುರು ಮತ್ತೊಮ್ಮೆ ಹೋರಾಟ ಮುಂದುವರಿಸುವುದಾಗಿ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಅಧ್ಯಕ್ಷ ಮಂಜೇಗೌಡ, ಶೇಷಣ್ಣ, ತಾರಾನಾಥ್, ಮಲ್ಲೇಶ್, ವಿರೂಪಾಕ್ಷ ಇತರರು ಇದ್ದರು.





### ಡಿ.6ರಂದು 300 ಕೋ.ರೂ. ವೆಚ್ಚದ ಕಾಮಗಾರಿಗೆ ಸಿಎಂ-ಡಿಸಿಎಂ ಚಾಲನೆ | ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾಹಿತಿ

## ಜಿಲ್ಲೆಯ 75 ಸಾವಿರ ಫಲಾನುಭವಿಗಳಿಗೆ ಸೌಲಭ್ಯ ಸಮರ್ಪಣೆ

**ಹಾಸನ:** ಪ್ರಗತಿ ಹಾದಿಯಲ್ಲಿ ಹಾಸನ, ಸರ್ಕಾರಿ ಸೇವೆಗಳ ಸಮರ್ಪಣಾ ಸಮಾವೇಶದಲ್ಲಿ ವಿವಿಧ ಇಲಾಖೆಗಳಿಂದ ಜಿಲ್ಲೆಯ 70 ರಿಂದ 75 ಸಾವಿರ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಸಮರ್ಪಣೆ ಮಾಡಲಾಗುವುದೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.6 ರಂದು ನಗರದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಮೈದಾನದಲ್ಲಿ ಹಮ್ಮಿ ಕೊಂಡಿರುವ ಸಮಾವೇಶಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆಗಮಿಸುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರ ನೇತೃತ್ವದಲ್ಲಿ ಅಂದು 300 ಕೋ.ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನರವೇರಲಿದೆ. ಕಾವೇರಿ ನೀರಾವರಿ ನಿಗಮದಿಂದ ಚನ್ನರಾಯಪಟ್ಟಣ ತಾಲ್ಲೂಕಿನ ಮುದ್ದನಹಳ್ಳಿಯಲ್ಲಿ 18 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಹಾಲುವಾಗಿನಲ್ಲಿ ನಿರ್ಮಿಸಿರುವ ಅಬ್ದುಲ್ ಕಲಾಂ ವಸತಿ ನಿಲಯ ಉದ್ಘಾಟನೆ, ಶ್ರವಣಬೆಳಗೊಳದಲ್ಲಿ ನಿರ್ಮಿಸಿರುವ ಇಂದಿರಾ ಗಾಂಧಿ ವಸತಿ ನಿಲಯಕ್ಕೆ ಚಾಲನೆ, ಅರಸೀಕೆರೆ ತಾಲ್ಲೂಕಿನಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ, ಸಕಲೇಶಪುರ ಮಿನಿ ವಿಧಾನಸೌಧ ಉದ್ಘಾಟನೆ, ಹಾಸನ ನಗರದಲ್ಲಿ 14.4 ಕೋ. ರೂ. ವೆಚ್ಚದಲ್ಲಿ ನಿರ್ಮಿಸಿರುವ ಪ್ರಜಾಸೌಧ ಉದ್ಘಾಟನೆ ಸೇರಿ 300 ಕೋ. ರೂ.ವೆಚ್ಚದ ಒಟ್ಟು 22 ಕಾಮಗಾರಿಗೆ ಚಾಲನೆ ನೀಡಲಿದ್ದಾರೆಂದು ಹೇಳಿದರು.

ಕಳೆದ ಎರಡು ವರ್ಷದಲ್ಲಿ ಕಂದಾಯ ಇಲಾಖೆಯಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಿವೆ. ಹತ್ತಾರು ವರ್ಷದಿಂದ ಇತ್ಯರ್ಥವಾಗದ ಭೂ ವಿವಾದವನ್ನು ಬಗೆಹರಿಸಲಾಗಿದೆ. ದರ್ಖಾಸ್ತು ಪೋಡಿ ಅಭಿಯಾನದ ಮೂಲಕ ಹಾಸನ ಜಿಲ್ಲೆ ರಾಜ್ಯದಲ್ಲೇ ಪ್ರಥಮ ಸ್ಥಾನ ಪಡೆದಿದೆ. 12 ಸಾವಿರ ಪಹಣಿ ಸೃಜನೆ ಮಾಡಿ ಹಲವು ವರ್ಷದಿಂದ ಕಚೇರಿಗೆ ಅಲೆಯುತ್ತಿದ್ದವರಿಗೆ ಪೋಡಿ ಮಾಡಿಕೊಡಲಾಗಿದೆ. ಸುಮಾರು 70 ಸಾವಿರ ಫಲಾನುಭವಿಗಳಿಗೆ ಪಹಣಿ, ಕಂದಾಯ ದಾಖಲೆ ಗಳನ್ನು ಒದಗಿಸಿಕೊಡಲಾಗುತ್ತಿದೆ. ಇದರಿಂದ ಸಾಕಷ್ಟು ಜನರು ಭೂ ವ್ಯಾಜ್ಯ ಪರಿಹಾರವಾಗಲಿದೆ ಎಂದರು.

» ನಾಲ್ಕನೇ ಪುಟದಲ್ಲಿ





#### ಹಿರಿಯರು ಪರಾಮರ್ಶೆ ಮಾಡಬೇಕು

ಸಮಾವೇಶಕ್ಕೆ ಅಧಿಕಾರಿಗಳಿಂದ ಹಣ ವಸೂಲಿ ಮಾಡಲಾಗಿದೆ ಎಂಬ ಹೆಚ್.ಡಿ.ರೇವಣ್ಣ ಅವರ ಆರೋಪಕ್ಕೆ ಪ್ರತಿಕ್ರಿಯಿಸಿ, ಇದು ಸಂಪೂರ್ಣ ಸರ್ಕಾರಿ ಕಾರ್ಯಕ್ರಮ. ಅನುಮೋದನೆ ಪಡೆದೇ ಹಣ ವೆಚ್ಚ ಮಾಡಲಾಗುತ್ತಿದೆ. ಹಿರಿಯರು ಎಲ್ಲವನ್ನೂ ಪರಾಮರ್ಶೆ ಮಾಡಿ ಮಾತನಾಡಬೇಕು. ಮಾಹಿತಿ ಕೊರತೆ ಇದ್ದರೆ ನನ್ನನ್ನು ಕೇಳಿದ್ದರೆ ನಾನೇ ನೀಡುತ್ತಿದ್ದೆ ಎಂದು ಹೇಳಿದರು.

306 ಸೆಕ್ಷನ್‌ನಡಿ ಪ್ರಕರಣ ದಾಖಲಾಗಿರುವ ಮಹಿಳೆಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿ, ಮಹಿಳೆ ಎಂಬ ಕಾರಣಕ್ಕೆ ಕೊಡಲಾಗಿದೆ. ಬೇರೆ ಏನನ್ನೂ ನಾನು ಪರಿಶೀಲಿಸಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಪ್ರಶಸ್ತಿಗೆ ಆಯ್ಕೆ ಮಾಡುವುದು ನಾನಲ್ಲ, ಉಪವಿಭಾಗಾಧಿಕಾರಿ, ಮುಂದಿನ ದಿನಗಳಲ್ಲಿ ಅರ್ಜಿ ಸ್ವೀಕರಿಸುವ ಬದಲು, ಜಿಲ್ಲಾಡಳಿತವೇ ಅರ್ಹರನ್ನು ಗುರುತಿಸಲಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

## ಸ್ವರಾಜ್ ಕೌಶಲ್ ನಿಧನ

• ಪ್ರಜೋದಯ ವರದಿ



**ನವದೆಹಲಿ:** ಬಿಜೆಪಿ ನಾಯಕಿಯಾಗಿದ್ದಿ॥ಸುಷ್ಮಾ ಸ್ವರಾಜ್ ಅವರ ಪತಿ ಸ್ವರಾಜ್ ಕೌಶಲ್ ಅವರು ಗುರುವಾರ ಮೃತಪಟ್ಟಿದ್ದಾರೆ. ಅವರಿಗೆ 73 ವರ್ಷವಾಗಿತ್ತು. ಲೋಧಿ ರಸ್ತೆಯಲ್ಲಿರುವ ಸ್ಮಶಾನದಲ್ಲಿ ಅವರ ಅಂತಿಮ ಕ್ರಿಯೆಗಳು ನಡೆದವು.

ಸಂಸದೆ ಹಾಗೂ ಸಚಿವೆ ಶ್ರುಶಿ ಬಾನ್ಸುರಿ ಸ್ವರಾಜ್ ಅವರ ತಂದೆ, ಸ್ವರಾಜ್ ಕೌಶಲ್ ಅವರು ಗುರುವಾರ ನಿಧನರಾಗಿದ್ದಾರೆಂದು ಬಿಜೆಪಿಯ ದೆಹಲಿ ಘಟಕ ಎಕ್ಸ್‌ಪೋಸ್ಟ್‌ನಲ್ಲಿ ತಿಳಿಸಿದೆ.

ಎದೆನೋವು ಕಾಣಿಸಿಕೊಂಡಿದ್ದರಿಂದ ತಕ್ಷಣವೇ ಅವರನ್ನು ದೆಹಲಿಯ ಏಮ್ಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಆಸ್ಪತ್ರೆ ಕರೆತರುವ ದಾರಿ ಮಧ್ಯೆಯೇ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದ್ದಾರೆ.

1952ರ ಜುಲೈ 12ರಂದು ಹಿಮಾಚಲ ಪ್ರದೇಶದ ಸೋಲನ್ ಜನಿಸಿದ್ದ ಸ್ವರಾಜ್ ಅವರು ತಮ್ಮ 37ನೇ ವಯಸ್ಸಿನಲ್ಲಿ ಮಿಜೋರಾಂನ ರಾಜ್ಯಪಾಲರಾಗಿ ನೇಮಕಗೊಂಡಿದ್ದರು. 34ನೇ ವಯಸ್ಸಿನಲ್ಲಿದ್ದಾಗ ಅವರನ್ನು ಹಿರಿಯ ವಕೀಲರಾಗಿ ಸುಪ್ರೀಂ ಕೋರ್ಟ್ ಗೊತ್ತುಪಡಿಸಿತ್ತು.

1998ರಿಂದ 2004ರವರೆಗೆ ಹರಿಯಾಣ ವಿಕಾಸ್ ಪಕ್ಷದಿಂದ ರಾಜ್ಯಸಭಾ ಸಂಸದರಾಗಿದ್ದರು. 1975ರಲ್ಲಿ ಸುಷ್ಮಾ ಸ್ವರಾಜ್ ಹಾಗೂ ಕೌಶಲ್ ಸ್ವರಾಜ್ ಅವರ ಮದುವೆ ನಡೆದಿತ್ತು. ಪುತ್ರಿ ಬಾನ್ಸುರಿ ಸ್ವರಾಜ್ ಅವರು ಅಂತಿಮ ವಿಧಿ ವಿಧಾನಗಳನ್ನು ನೆರವೇರಿಸಿದ್ದರು.

# ಶಾಸಕ ಸ್ವರೂಪ್, ರಸ್ತೆ ಕಾಮಗಾರಿ ಬಗ್ಗೆ ಅಪಪ್ರಚಾರ

## ಜೆಡಿಎಸ್ ಮುಖಂಡರ ಆಕ್ರೋಶ

• ಪ್ರಜೋದಯ ವರದಿ

**ಹಾಸನ:** ಸಾಲಗಾಮೆಯಿಂದ ಮಾದೀಹಳ್ಳಿ ಗೇಟ್ ವರೆಗೆ ಪ್ರಗತಿ ಹಂತದಲ್ಲಿರುವ 5 ಕಿ.ಮೀ ರಸ್ತೆ ಕಾಮಗಾರಿ ಹಾಗು ಶಾಸಕ ಹೆಚ್.ಪಿ.ಸ್ವರೂಪ್ ಅವರ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆಂದು ಜೆಡಿಎಸ್ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಾಲಗಾಮೆಯಿಂದ ಮಾದೀಹಳ್ಳಿ ಗೇಟ್ ವರೆಗೆ 12 ಕೋ.ರೂ. ವೆಚ್ಚದಲ್ಲಿ ಶಾಸಕ ಹೆಚ್.ಪಿ. ಸ್ವರೂಪ ಅವರು ರಸ್ತೆ ಕಾಮಗಾರಿ ಮಂಜೂರು ಮಾಡಿಸಿ, ಭೂಮಿಪೂಜೆ ನೆರವೇರಿಸಿದ್ದಾರೆ. ಈಗಾಗಲೇ ಕಾಮಗಾರಿ ಪ್ರಗತಿ ಹಂತದಲ್ಲಿದ್ದು, ಮಳೆ ಹಾಗು ಇನ್ನಿತರ ಕಾರಣಗಳಿಂದ ಕಾಮಗಾರಿ ವಿಳಂಬವಾಗಿದೆ. ಆದರೆ, ಕೆಲ ಕಿಡಿಗೇಡಿಗಳು ಅದನ್ನೇ ಮುಂದಿಟ್ಟುಕೊಂಡು ರಸ್ತೆ ಬಗ್ಗೆ ಹಾಗು ಶಾಸಕರ ಬಗ್ಗೆ ಅಪಪ್ರಚಾರ ಮಾಡುವ ಕೆಲಸ ಮಾಡುತ್ತಿದ್ದು, ಜೆಡಿಎಸ್ ಕಾರ್ಯಕರ್ತರು ಸಹಿಸುವುದಿಲ್ಲವೆಂದು ಎಚ್ಚರಿಕೆ ನೀಡಿದರು.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಶಾಸಕರಿಗೆ ಅನುದಾನವಿಲ್ಲದೆ ಪರದಾಡುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಕೇವಲ ಜೆಡಿಎಸ್ ಶಾಸಕರಿಗೆ ಮಾತ್ರವಲ್ಲ ಬಿಜೆಪಿ ಹಾಗು ಕಾಂಗ್ರೆಸ್ ಶಾಸಕರಿಗೂ ಅನುದಾನವಿಲ್ಲದೆ ಕೇವಲ ಗ್ಯಾರಂಟಿ ಯೋಜನೆಗಳಿಗಾಗಿ ಸರ್ಕಾರ ಹಣ ವ್ಯಯ ಮಾಡುತ್ತಿದೆ. ಇಂತಹ ಸಂದರ್ಭದಲ್ಲಿಯೂ ಶಾಸಕ ಸ್ವರೂಪ ಅವರು ಅನುದಾನ ತಂದುಜನರ ಹಿತ ದೃಷ್ಟಿಯಿಂದ ರಸ್ತೆ ಮಂಜೂರು ಮಾಡಿ ಕೆಲಸ ಆರಂಭಿಸಿದ್ದಾರೆ. ಆದರೆ, ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ರಸ್ತೆಯ ಬಗ್ಗೆ ಮನಬಂದಂತೆ ಮಾತನಾಡಿ ಅಪಪ್ರಚಾರ ಮಾಡುತ್ತಿರುವುದು ಖಂಡನೀಯವೆಂದು ಅಸಮಾಧಾನ ವ್ಯಕ್ತಪಡಿಸಿದರು.



ಸ್ವರೂಪ ಅವರು ಜನರ ಸಮಸ್ಯೆಗಳಿಗೆ ನಿರಂತರವಾಗಿ ಸ್ಪಂದಿಸಿ ಪ್ರತಿ ಹಳ್ಳಿ ಹಳ್ಳಿಗಳಿಗೂ ಭೇಟಿ ನೀಡಿ ತಮ್ಮ ಶಕ್ತಿಮೀರಿ ಅನುದಾನ ತಂದು ಎಲ್ಲಾ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಶ್ರಮ ವಹಿಸುತ್ತಿದ್ದಾರೆ. ಕೆಲವರು ಶಾಸಕರು ಗ್ರಾಮ ಗಳಿಗೆ ಭೇಟಿ ನೀಡುತ್ತಿಲ್ಲವೆಂಬ ಮಾತುಗಳನ್ನಾಡಿ ರುವುದು ಸಹಿಸಲಾಗದು. ಈ ಹಿಂದಿನ ಶಾಸಕ ರಾಗಿದ್ದ ಪ್ರೀತಮ್ ಗೌಡ ಅವರು ಚುನಾವಣೆ ಯಲ್ಲಿ ಗೆದ್ದ ನಂತರ ಕ್ಷೇತ್ರವನ್ನೇ ಮರೆತಿದ್ದರು. ಆದರೆ, ಸ್ವರೂಪ್ ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ ಕ್ಷೇತ್ರದ ಜನರ ಸಮಸ್ಯೆಗಳನ್ನು ಆಲಿಸುವ ಕೆಲಸ ಮಾಡುತ್ತಿದ್ದಾರೆ. ಅಂತಹವರ ವಿರುದ್ಧ ಅಪ ಪ್ರಚಾರ ಸಲ್ಲದು ಎಂದರು.

ಕೇವಲ ಸಾಲಗಾಮೆ ಕ್ಷೇತ್ರ ಮಾತ್ರವಲ್ಲದೆ ಎಲ್ಲಾ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಯ ಕನಸನ್ನಿಟ್ಟುಕೊಂಡಿರುವ ಶಾಸಕ ಸ್ವರೂಪ ಯಾವುದೇ ರೀತಿಯ ರಿಯಲ್ ಎಸ್ಟೇಟ್‌ನಲ್ಲಿ ತೊಡಗಿಲ್ಲ, ಕಳಂಕ ರಹಿತ ರಾಜಕಾರಣಿಯಾಗಿ, ಭ್ರಷ್ಟಾಚಾರ ರಹಿತ ಆಡಳಿತ ನಡೆಸುತ್ತಿದ್ದಾರೆ. ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದರೆ ಮುಂದಿನ ದಿನಗಳಲ್ಲಿ ತಕ್ಕ ಉತ್ತರ ಕೊಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಜೆಡಿಎಸ್ ಮುಖಂಡರಾದ ನೀಲಕಂಠ, ಶಿವಲಿಂಗಯ್ಯ, ರಿತೇಶ್, ಪ್ರತಾಪ್, ಯೋಗೀಶ್, ವಾಸು, ಸಚಿನ್, ಅನಿಲ್, ನಿಖಿಲ್, ಯಶವಂತ್ ಇದ್ದರು.

## ರೂಪಾಯಿ ಮೌಲ್ಯ ಕುಸಿತ ದೇಶದ ನಿಜವಾದ ಆರ್ಥಿಕ ಸ್ಥಿತಿ ತೋರಿಸುತ್ತದೆ : ಖರ್ಗೆ

• ಪ್ರಜೋದಯ ವರದಿ



**ನವದೆಹಲಿ:** ಅಮೇರಿಕಾದ ಡಾಲರ್ ಎದುರು ರೂಪಾಯಿ ಮೌಲ್ಯವು ದಾಖಲೆ ಮಟ್ಟಕ್ಕೆ ಕುಸಿದಿರುವುದು ದೇಶದ ನಿಜವಾದ ಆರ್ಥಿಕ ಪರಿಸ್ಥಿತಿ ಯನ್ನು ತೋರಿಸುತ್ತದೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಗುರುವಾರ ಹೇಳಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಅಮೇರಿಕಾದ ಡಾಲರ್ ಎದುರು ಬುಧವಾರ 90.15ಕ್ಕೆ ಕುಸಿದಿತ್ತು. ಗುರುವಾರದ ಆರಂಭಿಕ ವಹಿವಾಟಿನಲ್ಲೂ ಅಮೇರಿಕಾದ ಡಾಲರ್ ಎದುರು ರೂಪಾಯಿ ಮೌಲ್ಯ ಮತ್ತಷ್ಟು 28 ಪೈಸೆ ಕುಸಿತ ಕಂಡು ಸಾರ್ವಕಾಲಿಕ ಕನಿಷ್ಠ ಮೊತ್ತವಾದ 90.43ಕ್ಕೆ ತಲುಪಿದೆ. ಈ ಸಂಬಂಧ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಖರ್ಗೆ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಈ ಹಿಂದೆ ರೂಪಾಯಿ ಮೌಲ್ಯ ಕುಸಿತ ಕಂಡಿದ್ದಾಗ ಸ್ವತಃ ಮೋದಿ ಅವರೇ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು ಎಂದು ಖರ್ಗೆ ನೆನಪಿಸಿಕೊಂಡಿದ್ದಾರೆ.

## ಜಿಲ್ಲಾ ಕ್ರೀಡಾಂಗಣದಲ್ಲಿ 28ನೇ ರಾಜ್ಯಮಟ್ಟದ ಆದಿಚುಂಚನಗಿರಿ ಕ್ರೀಡಾಕೂಟ

## ಅಥ್ಲೆಟಿಕ್ಸ್: ಆದಿಚುಂಚನಗಿರಿ ಕಾಲೇಜು ವಿದ್ಯಾರ್ಥಿಗಳು ಮೇಲುಗೈ





• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 28ನೇ ರಾಜ್ಯಮಟ್ಟ ಆದಿಚುಂಚನಗಿರಿ ಕ್ರೀಡಾಕೂಟ-2025ರ ಅಥ್ಲೆಟಿಕ್ಸ್‌ನಲ್ಲಿ ಆದಿಚುಂಚನಗಿರಿ ಕಾಲೇಜು ಮತ್ತು ಶಾಲೆಯ ವಿದ್ಯಾರ್ಥಿಗಳು ಮೇಲುಗೈ ಸಾಧಿಸಿದ್ದಾರೆ.

19 ವರ್ಷದೊಳಗಿನ ಪದವಿ ಪೂರ್ವ ಕಾಲೇಜು ಬಾಲಕಿಯರ ವಿಭಾಗದ 200 ಮೀಟರ್ ಓಟದ ಸ್ಪರ್ಧೆಯಲ್ಲಿ ಆದಿಚುಂಚನಗಿರಿ ಕಾಲೇಜಿನ ಪಿ.ವಿ.ಐಶ್ವರ್ಯ ಪ್ರಥಮ ಸ್ಥಾನ ಪಡೆದು ಕೊಂಡರೆ, ಎಂ.ಬಿ.ಐಶ್ವರ್ಯ ದ್ವಿತೀಯ ಹಾಗು ಹಾಸನ ಕಾಲೇಜಿನ ಬಿ.ಕೆ.ಸಿಂಚನ ತೃತೀಯ ಸ್ಥಾನ ಪಡೆದುಕೊಂಡಿದ್ದಾಳೆ.

1,500 ಮೀಟರ್ ಓಟದ ಸ್ಪರ್ಧೆಯಲ್ಲಿ ಆದಿಚುಂಚನಗಿರಿ ಕಾಲೇಜಿನ ವಿ.ಪುಷ್ಪ (ಪ್ರ), ಸಹನ (ದ್ವಿ), ದೀಕ್ಷಿತಾ (ತೃ) ಹಾಗು 3,000 ಮೀಟರ್ ಓಟದಲ್ಲಿ ಆದಿಚುಂಚನಗಿರಿ ಕಾಲೇಜಿನ ವಿ.ಪುಷ್ಪ (ಪ್ರ), ವರ್ಷ (ದ್ವಿ), ಸ್ಪಂದನಾ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

4X100 ಮೀಟರ್ ರಿಲೆ ಸ್ಪರ್ಧೆಯಲ್ಲಿ ಆದಿಚುಂಚನಗಿರಿ ಕಾಲೇಜು (ಪ್ರ), ಕೋಲಾರ (ದ್ವಿ) ಶಿವಮೊಗ್ಗಾ ಮೂರನೇ ಸ್ಥಾನ ಪಡೆದುಕೊಂಡಿದೆ.

19 ವರ್ಷದೊಳಗಿನ ಬಾಲಕರ 200 ಮೀಟರ್ ಸ್ಪರ್ಧೆಯಲ್ಲಿ ಬಿ.ಜಿ.ನಗರ ಮಂಡ್ಯ ಕಾಲೇಜಿನ ಗಿರೀಶ್ ಕುಮಾರ್ (ಪ್ರ), ಚಿಕ್ಕಬಳ್ಳಾಪುರದ ಎನ್.ರಕ್ಷಿತ್ (ದ್ವಿ), ಆದಿಚುಂಚನಗಿರಿಯ ಶಶಾಂತ್ (ತೃ), 1,500 ಮೀಟರ್ ಓಟದ ಸ್ಪರ್ಧೆಯಲ್ಲಿ ಆದಿಚುಂಚನಗಿರಿ ಕಾಲೇಜಿನ ದಿನೇಶ್ (ಪ್ರ), ವಿಕಾಸ್ (ದ್ವಿ), ಹಾಸನದ ಧನರಾಜ್ (ತೃ) ಹಾಗು ಅದೇ ರೀತಿ 3,000 ಮೀಟರ್ ಓಟದಲ್ಲಿ ಆದಿಚುಂಚನ ಗಿರಿ ಕಾಲೇಜಿನ ದಿನೇಶ್ (ಪ್ರ), ವಿಕಾಸ್ ದ್ವಿ, ಹಾಸನದ ಧನರಾಜ್ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಉದ್ದಜಿಗಿತ ಸ್ಪರ್ಧೆಯಲ್ಲಿ ಮಂಡ್ಯದ ಗಿರೀಶ್ ಕುಮಾರ್ (ಪ್ರ), ರಾಹುಲ್ (ದ್ವಿ), ಕೊಡಗಿನ ಸಿ.ಆರ್.ಕೌಶಿಕ್ ಕುಮಾರ್ (ತೃ), ಚಕ್ರ ಎಸೆತ ಸ್ಪರ್ಧೆಯಲ್ಲಿ ಹಾಸನ ವಿನಯ್ (ಪ್ರ), ಬೆಂಗಳೂರಿನ ಯೋಗೇಶ್ (ದ್ವಿ), ಮಂಡ್ಯದ ಮಿಥುನ್ (ತೃ), ಥ್ರಿಬಲ್ ಜಂಪ್‌ನಲ್ಲಿ ನಾಗ ಮಂಗಲದ ರಾಹುಲ್ (ಪ್ರ), ಕೊಡಗಿನ ಸಿ.ಆರ್. ಕೌಶಿಕ್ ಕುಮಾರ್ (ದ್ವಿ), ಬಿ.ಜಿ.ನಗರದ ಪಿ.ಕೆ.ಪುನೀತ್ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

**ಪ್ರೌಢಶಾಲಾ ವಿಭಾಗ**

17 ವರ್ಷದೊಳಗಿನ ಪ್ರೌಢಶಾಲಾ ಬಾಲಕಿಯರ ವಿಭಾಗದ 200 ಮೀಟರ್ ಓಟದ ಸ್ಪರ್ಧೆ ಯಲ್ಲಿ ಆದಿಚುಂಚನಗಿರಿ ಕಾಲೇಜಿನ ಬಿ.ಮೈತ್ರಿ (ಪ್ರ), ಶಿವ ಮೊಗ್ಗಾದ ಕೆ.ಆರ್.ದಿವ್ಯ (ದ್ವಿ), ರಿತಿಕಾಶ್ರೀ (ತೃ), 1500 ಮೀಟರ್ ಸ್ಪರ್ಧೆ ಯಲ್ಲಿ ಶಿವಮೊಗ್ಗಾದ ಹೇಮಸಿಂಧು (ಪ್ರ), ಬಿ.ಜಿ. ನಗರದ ಎನ್.ಎಸ್.ವರ್ಷಿತಾ (ದ್ವಿ), ಆದಿಚುಂಚನಗಿರಿ ಪಾಲೇಟಿ ಅರ್ಪಣ (ತೃ), 300 ಮೀಟರ್‌ನಲ್ಲಿ ಶಿವಮೊಗ್ಗಾದ ಸೋನಿಯಾ (ಪ್ರ), ಹಾಸನದ ಕೃತಿಕಾ (ದ್ವಿ), ಆದಿಚುಂಚನಗಿರಿ ಪಾಲೇತಟಿ ಅರ್ಪಣ (ತೃ), ಗುಂಡು ಎಸೆತದಲ್ಲಿ ಬೆಂಗಳೂರಿನ ಕೆ.ದೀಪಿಕ (ಪ್ರ), ಕೋಲಾರದ ಎಸ್.ಸುಪ್ರಿತಾ(ದ್ವಿ), ಚಿಕ್ಕಬಳ್ಳಾಪುರದ ಹೆಚ್.ಎಸ್.ಸ್ಪೂರ್ತಿ ತೃತೀಯ ಸ್ಥಾನ ಪಡೆದು ಕೊಂಡಿದ್ದಾರೆ.

ಬಾಲಕರ ವಿಭಾಗದಲ್ಲಿ 200 ಮೀಟರ್ ಓಟದ ಸ್ಪರ್ಧೆಯಲ್ಲಿ ಶಿವಮೊಗ್ಗಾದ ವಂಶಿತ್ (ಪ್ರ), ಚಿಕ್ಕಬಳ್ಳಾಪುರದ ಎಂ.ನಿಹಾಂತ್(ದ್ವಿ), ಬಿ.ಜಿ.ನಗರದ ಸೈಯದ್ ರಫ್ಹಾನ್ (ತೃ), 1,500 ಮೀಟರ್‌ನಲ್ಲಿ ಶಿವಮೊಗ್ಗಾದ ಪೃಥ್ವಿ (ಪ್ರ), ಬಿ.ಜಿ.ನಗರದ ಜೀವನ್ (ದ್ವಿ), ತುಮಕೂರಿನ ಎಂ.ಎನ್.ಚಿರಾಗ್ (ತೃ), ಚಕ್ರ ಎಸೆತ ಸ್ಪರ್ಧೆಯಲ್ಲಿ ಹಾಸನದ ಚಂದನ್‌ಗೌಡ (ಪ್ರ), ಚಿಕ್ಕ ಬಳ್ಳಾಪುರದ ಜಗನ್‌ಗೌಡ (ದ್ವಿ), ಮೈಸೂರಿನ ಮಹೇಶ್ (ತೃ), ಉದ್ದ ಜಿಗಿತದಲ್ಲಿ ಉತ್ತರ ಕನ್ನಡದ ಅಂಗಾದ್ ವಿ.ನಾಯಕ್ (ಪ್ರ), ಆದಿಚುಂಚನಗಿರಿಯ ಸಿ.ಪೃಥ್ವಿ (ದ್ವಿ), ಶಿವಮೊಗ್ಗಾದ ಭೀಷ್ಮ (ತೃ), ಥ್ರಿಬಲ್ ಜಂಪ್ ನಲ್ಲಿ ಆದಿಚುಂಚನಗಿರಿಯ ಸಿ.ಪೃಥ್ವಿ (ಪ್ರ), ಉತ್ತರ ಕನ್ನಡದ ಅಂಗಾದ್ ವಿ.ನಾಯಕ್ (ದ್ವಿ), ಬಿ.ಜಿ.ನಗರದ ಸೈಯದ್ ರಫ್ಹಾನ್ (ತೃ), ಗುಂಡು ಎಸೆತದಲ್ಲಿ ಆದಿಚುಂಚನ ಗಿರಿಯ ವಿಕಾಶ್‌ಗೌಡ (ಪ್ರ), ತುಮಕೂರಿನ ಸೋಹನ್(ದ್ವಿ), ಹಾಸನದ ಚಂದನ್ ಗೌಡ ಮೂರನೇ ಸ್ಥಾನ ಪಡೆದುಕೊಂಡಿದ್ದಾನೆ.

**ಪ್ರಾಥಮಿಕ ಶಾಲಾ ವಿಭಾಗ**

ಪ್ರಾಥಮಿಕ ಶಾಲಾ 14 ವರ್ಷದೊಳಗಿನ ಬಾಲಕರ ವಿಭಾಗದ 200 ಮೀಟರ್‌ನಲ್ಲಿ ಚಿಕ್ಕ ಬಳ್ಳಾಪುರದ ತವನೀತ್ (ಪ್ರ), ಕೋಲಾದ ಹೇಮಾಂತ್ ಕುಮಾರ್ (ದ್ವಿ), ಉತ್ತರ ಕನ್ನಡದ ಅಶ್ವಥ್ ಮೂರ್ತಿ (ತೃ), ಗುಂಡು ಎಸೆತದಲ್ಲಿ ಕೋಲಾರದ ಹೇಮಾಂತ್ ಕುಮಾರ್ (ಪ್ರ), ಉ.ಕನ್ನಡದ ಗೌತಮ್ ಎನ್.ನಾಯಕ್ (ದ್ವಿ), ತುಮಕೂರಿನ ಆಯುಷ್ (ತೃ), 600 ಮೀಟರ್ ನಲ್ಲಿ ಆದಿಚುಂಚನಗಿರಿಯ ಮಾದೇಶ್ (ಪ್ರ), ಮೈಸೂರು-1 ಪವನ್ ಕುಮಾರ್ (ದ್ವಿ), ಉತ್ತರ ಕನ್ನಡ ಅಮಯ್ ಹರಿಕಾಂತ್ (ತೃ), ಉದ್ದ ಜಿಗಿತದಲ್ಲಿ ಕೋಲಾರದ ಹೇಮಂತ್ ಕುಮಾರ್ (ಪ್ರ), ಚಿಕ್ಕಮಗಳೂರಿನ ಕೋಮಲ್ (ದ್ವಿ), ತುಮಕೂರಿನ ಬಿ.ಕೆ.ವಿಕಾಶ್ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಬಾಲಕಿಯರ ವಿಭಾಗದಲ್ಲಿ ಚಿಕ್ಕಬಳ್ಳಾಪುರದ ಲಕ್ಷ (ಪ್ರ), ತುಮಕೂರಿನ ತೇಜಸ್ವಿನಿ (ದ್ವಿ), ಭದ್ರವತಿಯ ಎಸ್.ಆರ್.ಖುಷಿ (ತೃ), 600 ಮೀಟರ್‌ನಲ್ಲಿ ಶಿವಮೊಗ್ಗಾದ ದೀಕ್ಷ (ಪ್ರ), ಆದಿಚುಂಚನಗಿರಿ ಬೊಯ ಶ್ರುತಿ ಶಾಲಿನಿ (ದ್ವಿ), ಶಿವಮೊಗ್ಗಾದ ಕಾವ್ಯ (ತೃ), ಉದ್ದ ಜಿಗಿತದಲ್ಲಿ ಆರ್.ಸೋನು (ಪ್ರ), ಹಾಸನ ಪಾವನ (ದ್ವಿ), ತುಮಕೂರಿನ ತೇಜಸ್ವಿನಿ (ತೃ), ಚಕ್ರ ಎಸೆತದಲ್ಲಿ ಬೆಂಗಳೂರಿನ ತನುಶ್ರೀ (ಪ್ರ), ಮೈಸೂರಿನ ಲಕ್ಷ್ಮಿ (ದ್ವಿ), ಶಿವಮೊಗ್ಗಾದ ವಿನಯಶ್ರೀ (ತೃ) ಗುಂಡು ಎಸೆತದಲ್ಲಿ ಚಿಕ್ಕಬಳ್ಳಾಪುರದ ನವ್ಯ (ಪ್ರ), ಬೆಂಗಳೂರಿನ ಮಾನ್ಯ (ದ್ವಿ), ಚಿಕ್ಕಬಳ್ಳಾಪುರ ಹರ್ಷಿಕ ರೆಡ್ಡಿ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.



ಸಕಲೇಶಪುರ: ತಾಲ್ಲೂಕಿನ ಕುಣಿಗನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ತಾರಾ ಮಹೇಶ್ ಅವರು ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಯಾದರು.

ಕಾಂಗ್ರೆಸ್ ಸರ್ಕಾರದ ಆಡಳಿತ, ಅಭಿವೃದ್ಧಿ ಕಾರ್ಯಗಳು ಹಾಗೂ ಪಕ್ಷದ ನಾಯಕತ್ವದ ನಿಲುವುಗಳನ್ನು ಮೆಚ್ಚಿ, ತಮ್ಮ ಬೆಂಬಲಿಗರೊಂದಿಗೆ ತಾಲ್ಲೂಕು ಗ್ಯಾರಂಟಿ ಯೋಜನಾ ಸಮಿತಿ ಅಧ್ಯಕ್ಷ ಮುರಳಿ ಮೋಹನ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡರು. ಕ್ಷೇತ್ರದ ಕಾಂಗ್ರೆಸ್ ಮುಖಂಡರು, ಕುಣಿಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ವಿವಾದಿತ ವಿಧೇಯಕಗಳಿಗೆ ಸಂಪುಟ ಅಸ್ತು

» ಮೊದಲನೇ ಪುಟದಿಂದ

ಧಾರ್ಮಿಕ ದತ್ತಿ ವಿಧೇಯಕ, ಜಾನುವಾರು ಹತ್ಯೆ ಪ್ರತಿಬಂಧಕ ಹತ್ಯೆ ಸಂರಕ್ಷಣೆ ವಿಧೇಯಕ, ಸಾಮಾಜಿಕ ಬಹಿಷ್ಕಾರ ನಿಷೇಧ ವಿಧೇಯಕ, ಘಾಟಿ ಸುಬ್ರಮಣ್ಯ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, ಚಾಮುಂಡೇಶ್ವರಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಮತ್ತು ಇತರೆ ಕಾನೂನುಗಳ (ತಿದ್ದುಪಡಿ) ವಿಧೇಯಕ ಹಾಗೂ ಕರ್ನಾಟಕ ರಾಜ್ಯ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕಕ್ಕೆ ಸಂಪುಟ ಸಭೆ ಒಪ್ಪಿಗೆ ಸೂಚಿಸಿದೆ ಎಂದರು.

ಮೆಕ್ಕೆ ಜೋಳವನ್ನು ಖರೀದಿಸುವ ಬಗ್ಗೆ ರಾಜ್ಯ ಸರ್ಕಾರ ಹಲವು ಪ್ರಯತ್ನ ಮಾಡುತ್ತಿದೆ.17,500ಲಕ್ಷ ಎಕರೆ ಭೂಮಿ ಯಲ್ಲಿ 55 ಲಕ್ಷ ಟನ್ ಮೆಕ್ಕೆ ಜೋಳ ಬೆಳೆದಿದೆ. ಎಥನಾಲ್ ಕಾರ್ಖಾನೆಗಳು 7.50 ಲಕ್ಷ ಟನ್ ಖರೀದಿಸಬೇಕಾಗಿದೆ. ಎಂ.ಎಸ್.ಪಿ. ದರ 2,400 ರೂ.ಗಳಿಗೆ ಖರೀದಿಸ ಬೇಕು. 2639 ರೂ.ಗಳನ್ನು ನೀಡ ಬೇಕೆಂಬ ಕೇಂದ್ರ ಸರ್ಕಾರದ ಸೂಚನೆ ಯಲ್ಲಿ ಎಥನಾಲ್ ಫ್ಯಾಕ್ಟರಿಯವರು ಸರ್ಕಾರದ ಜೊತೆ ಚರ್ಚಿಸಿ 239 ರೂ. ಗಳನ್ನು ರಾಜ್ಯ ಸರ್ಕಾರ ನೀಡಿ ದರೆ, ರೈತರಿಗೆ 2400 ನೀಡಬೇಕೆಂದು ಸೂಚಿಸಲಾಗಿತ್ತು. ಕೆಲವರು ಇಂಡೆಂಟ್ ಕೊಟ್ಟಿದ್ದಾರೆ, ಕೆಲವರು ಕೊಟ್ಟಿಲ್ಲ. ಇಂಡೆಂಟ್ ಕೊಟ್ಟಿಲ್ಲದವರಿಗೆ ಸೂಕ್ತ ಸೂಚನೆಯನ್ನು ನೀಡಬೇಕೆಂದು ಸೂಚಿಸಲಾಗಿದೆ. ಅದರ ಜೊತೆಗೆ ಕೆಎಂಎಫ್ ಅವರು 50,000 ಮೆ.ಟನ್ ಖರೀದಿಸಬೇಕು. ಆದಷ್ಟು ಬೇಗ ಖರೀದಿಸಲು ಈಗಾಗಲೇ ನೋಂದಣಿ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ಮಾರು ಕಟ್ಟೆಯಲ್ಲಿ ಸ್ಥಿರತೆ ಸಾಧ್ಯವಾಗಲಿದೆ ಎಂದು ತಿಳಿಸಿದರು.

## ಜಿಲ್ಲೆಯ 75 ಸಾವಿರ ಫಲಾನುಭವಿಗಳಿಗೆ ಸೌಲಭ್ಯ ಸಮರ್ಪಣೆ

• ಮೊದಲನೇ ಪುಟದಿಂದ

**ಇ-ಪೌತಿ ಅಭಿಯಾನ**

ಇ-ಪೌತಿ ಅಭಿಯಾನದ ಮೂಲಕ ಆರ್‌ಟಿಸಿಗೆ ಆಧಾರ್ ಜೋಡಣೆ ಕಾರ್ಯಕ್ರಮದ ಮೂಲಕ 18 ಲಕ್ಷ ರೈತರ ಆರ್‌ಟಿಸಿಗೆ ಆಧಾರ್ ಲಿಂಕ್ ಮಾಡಲಾಗಿದೆ. ಈ ಮೂಲಕ ಹಾಸನ ರಾಜ್ಯದಲ್ಲಿ ಪ್ರಥಮ ಸ್ಥಾನ ಹೊಂದಿದೆ. ಜಿಲ್ಲೆಯ 2 ಲಕ್ಷ ಪಹಣಿಯಲ್ಲಿ ವಾರಸುದಾರರಿರಲಿಲ್ಲ. ಉಸ್ತುವಾರಿ ಸಚಿವರ ನಿರ್ಧಾರದಂತೆ ಆಂದೋಲ ನದ ರೀತಿ ಇಂಡೀಕರಣ ಮಾಡಿ ಮನೆ ಬಾಗಿಲಿಗೆ ದಾಖಲಾತಿ ಒದಗಿಸಿಕೊಡ ಲಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಸರ್ಕಾರಿ ಭೂಮಿ ಯಲ್ಲಿ ಹಲವು ವರ್ಷಗಳಿಂದ ಗುಡಿ ಸಲು ಅಥವಾ ಮನೆ ನಿರ್ಮಿಸಿಕೊಂಡು ವಾಸಿಸುತ್ತಿದ್ದವರನ್ನು ಗುರುತಿಸಿ ಕಂದಾಯ ಗ್ರಾಮಗಳನ್ನಾಗಿ ಮಾಡಿ ಸವಲತ್ತು ಒದಗಿಸಲಾಗಿದೆ. ಜಿಲ್ಲೆ ಯಲ್ಲಿ 50 ಕಂದಾಯ ಗ್ರಾಮಗಳನ್ನು ಗುರುತಿಸಿ 94-ಡಿ ಅಡಿಯಲ್ಲಿ ಹಕ್ಕು ಪತ್ರ ನೀಡಲಾಗಿದೆ. 5 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಇದರ ಅಡಿ ಯಲ್ಲಿ ಹಕ್ಕುಪತ್ರ ನೀಡಲಾಗಿದೆ. ಇದ ರಿಂದ 50 ಸಾವಿರ ಕುಟುಂಬಗಳಿಗೆ ನೆರವಾಗಿದೆ. ಸವಲತ್ತು, ಶಂಕು ಸ್ಥಾಪನೆ, ಉದ್ಘಾಟನೆಯ ಸರ್ಕಾರಿ ಸೇವೆಯನ್ನು ಜನರಿಗೆ ಸಮರ್ಪಣೆ ಮಾಡಲಾಗುತ್ತಿದೆ ಎಂದರು.

**1154 ಬಸ್, 250 ಖಾಸಗಿ ವಾಹನ**

ವಿವಿಧ ಇಲಾಖೆಗಳಿಂದ ಮಳಿಗೆಗಳನ್ನು ತೆರೆದು ಸಮಾವೇಶದಲ್ಲಿ ಭಾಗವಹಿಸುವ ರೈತರಿಗೆ ಪ್ರದರ್ಶನಕ್ಕೆ ಇಡಲಾಗುತ್ತಿದೆ. ಸಮಾವೇಶಕ್ಕೆ ಫಲಾನು ಭವಿಗಳನ್ನು ಕರೆ ತರಲು 1154 ಸಾರಿಗೆ ಬಸ್, 250 ಖಾಸಗಿ ವಾಹನಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಪ್ರತಿ ಬಸ್‌ಗೆ ಒಬ್ಬರಂತೆ ನೋಡೆಲ್ ಅಧಿಕಾರಿ ನೇಮಿಸಲಾಗಿದೆ. ಅವರಿಗೆ ಬೆಳಗಿನ ಉಪಾಹಾರ, ಕುಡಿಯುವ ನೀರು ಇತ್ಯಾದಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ವಿವರಿಸಿದರು. ಜಿಲ್ಲಾ ಪಂಚಾ ಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಇತರೆ ಇಲಾಖೆ ಅಧಿಕಾರಿಗಳು ಇದ್ದರು.

# ದೇಶದ ಜನಸಂಖ್ಯೆಗೆ ತಕ್ಕಂತೆ ಕ್ರೀಡಾ ಕ್ಷೇತ್ರದ ಸಾಧನೆ ಸಾಗಲಿ

» ಮೊದಲನೇ ಪುಟದಿಂದ

ಆರೋಗ್ಯದಿಂದ ಇರಬೇಕಾದರೆ ಆಟೋಟ ಸಹಾಯಕಾರಿ. ಅದನ್ನು ಮನಗಂಡು 28 ವರ್ಷಗಳ ಹಿಂದೆಯೇ ಭೈರವೈಕ್ಯ ಡಾ.ಬಾಲ ಗಂಗಾಧರ ಮಹಾಸ್ವಾಮೀಜಿ ಅವರು ಕ್ರೀಡಾಕೂಟ ಆರಂಭಿಸಿದ್ದರು. ಮೊದಲು ಶಿವಮೊಗ್ಗಾದಿಂದ ಆರಂಭವಾಗಿ, ನಡುವೆ ಎರಡು ವರ್ಷ ಹೊರತು ಪಡಿಸಿದರೆ ಆರಂಭದಿಂದ ಇಲ್ಲಿಯವರೆಗೂ ಸುಗಮವಾಗಿ ಕ್ರೀಡಾಕೂಟ ನಡೆದುಕೊಂಡು ಬರುತ್ತಿದೆ ಎಂದರು.



ವರ್ಷಕ್ಕೆ ಒಂದೊಂದು ಜಿಲ್ಲೆಯಲ್ಲಿ ಸ್ಪರ್ಧೆ ನಡೆಸಲಾಗುತ್ತಿದೆ. 13ನೇ ರಾಜ್ಯಮಟ್ಟದ ಕ್ರೀಡಾಕೂಟ ಹಾಸನದಲ್ಲೇ ನಡೆದಿತ್ತು. 28ನೇ ವರ್ಷದ ಕ್ರೀಡಾಕೂಟವೂ ಇಲ್ಲೇ ನಡೆಯುತ್ತಿದ್ದು, ಭಕ್ತರು-ಅಧಿಕಾರಿಗಳ ಸಹಕಾರದಿಂದ ಹಾಗು ಶ್ರೀ ಶಂಭುನಾಥ ಸ್ವಾಮೀಜಿ ಅವರ ನೇತೃತ್ವದಲ್ಲಿ ಉತ್ತಮವಾಗಿ ಕ್ರೀಡಾಕೂಟ ನಡೆದುಕೊಂಡು ಬರುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿದರು.

ಸೋಲು-ಗೆಲುವು, ನೆರಳು-ಬೆಳಕಿನ ಹಾಗೆ. ಎಲ್ಲರೂ ಕ್ರೀಡೆಯ ಮಹತ್ವವನ್ನು ಅರ್ಥೈಸಿಕೊಳ್ಳಬೇಕು. ಮಾಜಿ ಪ್ರಧಾನಿ ದೇವೇಗೌಡ ಅವರ ಬದುಕಿನಲ್ಲಿ ಕ್ರೀಡೆ ಸಾಕಷ್ಟು ಪ್ರಭಾವ ಬೀರಿದೆ. ಕ್ರೀಡೆಯಲ್ಲಿ ಸೋಲು-ಗೆಲುವು ಇರುವಂತೆ, ಅವರ ರಾಜಕೀಯದಲ್ಲೂ ಏಳು-ಬೀಳು ಕಂಡಿದ್ದಾರೆ. ಕ್ರೀಡಾ ಮನೋಭಾವನೆಯಿಂದ ಸಮಚಿತ್ತದಿಂದ ಸೋಲು-ಗೆಲುವನ್ನು ಸ್ವೀಕಾರ ಮಾಡಿದ್ದು, ಇದು ನನಗೆ ಶ್ರೀಮಠ ಕಲಿಸಿದ ಸಂಸ್ಕಾರ ಎಂದಿದ್ದಾರೆ. ಹಾಗಾಗಿ ನೀವೆಲ್ಲರೂ ಕ್ರೀಡೆಯಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳಬೇಕೆಂದು ಕರೆ ನೀಡಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಹಿಂದೆ ಹಾಸನದಲ್ಲಿ ಕ್ರೀಡಾಕೂಟ ನಡೆದಾಗ ನಮ್ಮ ತಂದೆ ದಿ.ಹೆಚ್.ಎಸ್.ಪ್ರಕಾಶ್ ಶಾಸಕರಾಗಿದ್ದರು. ಈಗ ನಾನು ಶಾಸಕ ಆಗಿದ್ದು, ಇದು ನನ್ನ ಸೌಭಾಗ್ಯ. ಶ್ರೀಮಠದ ಸೇವೆ ಮಾಡಲು ನಾನು ಸದಾ ಸಿದ್ದನಿರುವುದಾಗಿ ಭರವಸೆ ನೀಡಿದರು.

**ಕ್ರೀಡಾ ಜ್ಯೋತಿ ಸ್ವೀಕಾರ**

ಸರಸ್ವತಿ, ಭಾರ್ಗವಿ, ನೇಹಾ, ರೇವತಿ ಪಿ.ಎಲ್ ಸೇರಿ ವಿವಿಧ ಆಟಗಳಲ್ಲಿ ಸಾಧನೆ ಮಾಡಿರುವ ಆಟಗಾರ್ತಿಯರು ತಂದ ಕ್ರೀಡಾ ಜ್ಯೋತಿಯನ್ನು ಅಂತರ್ರಾಷ್ಟ್ರೀಯ ಕ್ರೀಡಾಪಟುಗಳಾದ ಪೂನಂ ಬೆಳ್ಳಿಯಪ್ಪ, ಹರ್ಷಿತ್ ಇಂಚರಾ ಸ್ವೀಕರಿಸಿದರು. ನಂತರ ಕ್ರೀಡಾ ಪ್ರತಿಜ್ಞೆ ಬೋಧಿಸಲಾಯಿತು. ಶಾಸಕರಾದ ಸಿ.ಎನ್.ಬಾಲಕೃಷ್ಣ, ಹೆಚ್.ಪಿ.ಸ್ವರೂಪ್ ಹಾಗೂ ಹತ್ತಾರು ತಂಡಗಳಿಂದ ಗೌರವ ವಂದನೆ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಬಿಜಿಎಸ್ ಕ್ರೀಡಾ ಸಂಭ್ರಮ ಪುಸ್ತಕ ಬಿಡುಗಡೆ ಮಾಡಲಾಯಿತು.

**ಸಾನಿಧ್ಯ ವಹಿಸಿದ್ದ ಸ್ವಾಮೀಜಿಗಳು**

ಚಿಕ್ಕಬಳ್ಳಾಪುರ-ಕೋಲಾರ ಶಾಖಾ ಮಠದ ಮಂಗಳನಾಥ ಸ್ವಾಮೀಜಿ, ಮೈಸೂರಿನ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ತಿಪಟೂರು ದಸರೀಘಟ್ಟದ ಶ್ರೀ ಚಂದ್ರಶೇಖರನಾಥ ಸ್ವಾಮೀಜಿ, ಬೆಂಗಳೂರು ವಿಜಯನಗರದ ಶ್ರೀ ಸೌಮ್ಯನಾಥ ಸ್ವಾಮೀಜಿ, ಶೃಂಗೇರಿ ಮಠದ ಶ್ರೀ ಗುಣನಾಥ ಸ್ವಾಮೀಜಿ, ರಾಮನಗರದ ಶ್ರೀ ಅನ್ನದಾನೇಶ್ವರ ಸ್ವಾಮೀಜಿ, ಉತ್ತರ ಕನ್ನಡದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ಬಿ.ಜಿ.ನಗರದ ಶ್ರೀ ಸತ್ಯಕೀರ್ತಿನಾಥ ಸ್ವಾಮೀಜಿ, ಕಬ್ಬಳಿ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ ಪಾವನ ಸಾನಿಧ್ಯ ವಹಿಸಿದ್ದರು.

ಮಠದ ಟ್ರಸ್ಟಿ ದೇವರಾಜು, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮುದ್ದೇಗೌಡ, ಜಿಲ್ಲಾ ಕಸಾಪ ಅಧ್ಯಕ್ಷ ಡಾ. ಎಚ್.ಎಲ್.ಮಲ್ಲೇಶಗೌಡ, ಸೋಮಶೇಖರ್, ಬೇಲೂರು ನಾಗರಾಜ್, ಕೆ.ಆರ್.ಮುತ್ತಣ್ಣ ಸೋಮವಾರಪೇಟೆ ಒಕ್ಕಲಿಗರ ಸಂಘದ ಅಧ್ಯಕ್ಷ, ಗೋಪಾಲಯ್ಯ, ಎಸ್.ಎಸ್. ರಘುಗೌಡ, ಹೆಚ್.ಎಸ್.ಅನಿಲ್ ಕುಮಾರ್ ಇದ್ದರು.



**ಭಾರತ ಏಕದಿನ ಕ್ರಿಕೆಟ್ ತಂಡದ ಆಟಗಾರ ರೋಹಿತ್ ಶರ್ಮಾ ಅವರು 2026ರ ಟಿ-20 ವಿಶ್ವಕಪ್‌ನ ಭಾರತ ತಂಡದ ಜೆರ್ಸಿಯನ್ನು ಅನಾವರಣಗೊಳಿಸಿದರು.**

## ಪ್ರಕೃತಿ ಸಮತೋಲನದ ರಕ್ಷಣೆ ಎಲ್ಲರ ಕರ್ತವ್ಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ದೇಶದಲ್ಲಿ ಅರಣ್ಯ ಸಂಪತ್ತಿನ ಪ್ರಮಾಣವು ದಿನೇ ದಿನೇ ಕಡಿಮೆಯಾಗುತ್ತಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಬೆಲಸಿಂದ ಶ್ರೀವನದಲ್ಲಿ ಅರಣ್ಯ ಇಲಾಖೆ ವತಿಯಿಂದ ಗುರುವಾರ ಆಯೋಜಿಸಿದ್ದ ಚಿನ್ನರ ವನದರ್ಶನ ಪ್ರವಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಕೃತಿ ಸಮತೋಲನದ ರಕ್ಷಣೆ ಎಲ್ಲರ ಕರ್ತವ್ಯವಾಗಿದೆ ಎಂದರು.

ಅರಣ್ಯ ಸಂಪತ್ತು ಇದ್ದರೆ ಉತ್ತಮ ಗಾಳಿ ಸಿಗಲಿದ್ದು, ವಾಡಿಕೆಯಂತೆ ಮಳೆಯಾಗಲಿದೆ. ಮನುಷ್ಯ ಹಾಗೂ ಪ್ರಾಣಿಗಳ ನಡುವೆ ಸಂಘರ್ಷ ಆಗಬಾರದು. ಮರ-ಗಿಡಗಳ ಹಾಗೂ ಪ್ರಾಣಿಗಳ ಸಂಕುಲನ ಉಳಿಸಬೇಕೆಂದು ತಿಳಿಸಿದರು.

ಕಾಡಂಚಿನ ಪ್ರದೇಶಗಳಲ್ಲಿ ಭೂಕಬಳಿಕೆ, ಮಾನವ ಮತ್ತು ಪ್ರಾಣಿ ಸಂಘರ್ಷವಾಗುತ್ತಿದೆ, ಇದು ನಿಲ್ಲಬೇಕು, ಭವಿಷ್ಯದ ದೃಷ್ಟಿಯಿಂದ ಮಕ್ಕಳಿಗೆ ಈ ರೀತಿಯ ವನದರ್ಶನ ಕಾರ್ಯಕ್ರಮ ಅರಣ್ಯ ಇಲಾಖೆ ಹಮ್ಮಿಕೊಂಡಿರುವುದು ಒಳ್ಳೆಯ ಬೆಳವಣಿಗೆ ಎಂದು ಶ್ಲಾಘಿಸಿದರು.



ಮಕ್ಕಳಲ್ಲಿ ಪರಿಸರದ ಬಗ್ಗೆ ಜಾಗೃತಿ ಉಂಟು ಮಾಡುತ್ತಿದೆ, ಇದೀಗ ಬೆಲಸಿಂದ ವನ ಪ್ರವಾಸಿ ಗರನ್ನು ಆಕರ್ಷಿಸುತ್ತಿದೆ. ಪರಿಸರದ ಬಗ್ಗೆ ಅಗತ್ಯ ಕಾಳಜಿ ವಹಿಸಿದ್ದಲ್ಲಿ ಮುಂದಿನ ಭವಿಷ್ಯಕ್ಕೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಎಚ್ಚರಿಸಿದರು.

ಅರಣ್ಯ ಇಲಾಖೆಯ ಎಸಿಎಫ್ ಖಲಂದರ್ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಶೇ.4 ರಷ್ಟು ಮಾತ್ರ ಅರಣ್ಯ ಪ್ರದೇಶವಿದೆ. ರಾಜ್ಯದಲ್ಲಿ ಶೇ.19 ರಷ್ಟು ಮಾತ್ರವಿದೆ. ಕಾಡನ್ನು ಉಳಿಸ ಬೇಕು. ಮರ-ಗಿಡಗಳನ್ನು ರಕ್ಷಿಸಬೇಕು. ಮಕ್ಕಳಲ್ಲಿ ಪರಿಸರ ಜ್ಞಾನ ಬೆಳೆಸಲು ಈ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಪ್ರವಾಸದಲ್ಲಿ, ಬಾಗೂರು ಸರ್ಕಾರಿ ಪ್ರೌಢಶಾಲೆಯ 52 ವಿದ್ಯಾರ್ಥಿಗಳು ಪಾಲ್ಗೊಂಡಿದ್ದು, ಪರಿಸರ ಕಾಡು ಪ್ರಾಣಿಗಳ ಬಗ್ಗೆ ಅರಣ್ಯ ಇಲಾಖೆಯ ಸಂಪನ್ಮೂಲ ವ್ಯಕ್ತಿಗಳು ಮಾರ್ಗದರ್ಶನ ನೀಡಿದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ವಿದ್ಯಾರ್ಥಿಗಳಿಗೆ ಬ್ಯಾಗ ಹಾಗೂ ಪರಿಕರಗಳನ್ನು ವಿತರಿಸಿದರು. ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು.

## ಬೆಂಬಲ ಬೆಲೆಗೆ ದೇವರ ಮೊರೆ ಹೋದ ರೈತರು

• ಪ್ರಜೋದಯ ವರದಿ

**ಹಳೇಬೀಡು:** ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ ಸಿಗಲೆಂದು ರೈತರು ದೇವರ ಮೊರೆ ಹೋಗಿದ್ದಾರೆ. ಹಳೀಬೀಡಿನ ಇತಿಹಾಸಿಕ ಹೊಯ್ಸಳೇಶ್ವರ ದೇವಾಲದಲ್ಲಿ ಪೂಜೆ ಸಲ್ಲಿಸಿ ಪ್ರಾರ್ಥಿಸಿದ್ದಾರೆ.

ಈ ವೇಳೆ ರೈತ ಸಮಿತಿ ಸಾಮೂಹಿಕ ಅಧ್ಯಕ್ಷ ಹಾಲಪ್ಪ ಅವರು ಮಾತನಾಡಿ, ಇಂದಿನ ಜನ ಪ್ರತಿನಿಧಿಗಳನ್ನು ನಂಬಿದರೆ ಯಾವ ಪ್ರಯೋಜನವಿಲ್ಲ ಅದಕ್ಕೆ ನಾವುಗಳು ದೇವರನ್ನು ನಂಬಿ ದೇವಾಲಯಕ್ಕೆ ಬಂದಿದೇವೆ ಎಂದು ತಿಳಿಸಿದರು.

ರೈತ ಸಂಘ ಜಿಲ್ಲಾ ಉಪಾಧ್ಯಕ್ಷ ಕೆ.ಪಿ.ಕುಮಾರ್ ಅವರು ಮಾತನಾಡಿ, ರಾಜ್ಯ ಸರ್ಕಾರ ರೈತರ ಬಗ್ಗೆ ಅಗೌರವ ತೋರುತ್ತಾ ಬಂದಿದೆ. ರೈತರ ಮುಷ್ಕರದಲ್ಲಿ ತಕ್ಷಣವೇ ಸರ್ಕಾರ 600 ರೂ. ಬೆಂಬಲ ಬೆಲೆ ನೀಡುತ್ತವೆಂಬ ಘೋಷಣೆ ಮಾಡಿತ್ತು. ರಾಜ್ಯ ಸರ್ಕಾರದ ಆದೇಶ ಹಣ ಬಂದಿಲ್ಲ ಎಂದು ದೂರಿದರು.

ರೈತ ಸಂಘದ ಹೋಬಳಿಯ ಪ್ರಧಾನ ಕಾರ್ಯದರ್ಶಿ ಗಂಗಾಧರಪ್ಪ ಮಾತನಾಡಿ, ಒಂದು ವಾರದ ಹಿಂದೆ ಹಳೇಬೀಡಿನಲ್ಲಿ ರೈತರ ಹೋರಾಟದಲ್ಲಿ ಬೆಂಬಲ ಬೆಲೆ ನೀಡಬೇಕು ಎಂಬ ಮುಷ್ಕರದಲ್ಲಿ ರಾಜ್ಯ ಸರ್ಕಾರ 600 ಬೆಂಬಲ ಹಣ ಕೊಡುತ್ತೆವೆ ಎಂದು ಹೇಳಿದರು ಇಲ್ಲಿಯ ತನಕ ನೀಡಿಲ್ಲ ರೈತರಿಗೆ ರಾಜ್ಯ ಸರ್ಕಾರ ತುಂಬಾ ಅಪಮಾನ ಮಾಡಿದೆ ಇದೆ ಬಗ್ಗೆ ತಕ್ಷಣವೇ ಉತ್ತರ ಕೊಡುತ್ತವೆ ಎಂದು ತಿಳಿಸಿದರು. ರೈತ ಸಂಘದ ಮುಖಂಡರಾದ ಮುನ್ನಬಾಯಿ, ಮಹೇಶ್, ಅಡುಗೆರಾಜು, ಹಾಜರಿದ್ದರು.

## ಹೈನುಗಾರಿಕೆ ನಷ್ಟವಿಲ್ಲದ ಉದ್ಯೋಗ



• ಪ್ರಜೋದಯ ವರದಿ

**ಅರಕಲಗೂಡು:** ಹೈನುಗಾರಿಕೆಯಿಂದ ದೈನಂದಿನ ಜೀವನ ನಿರ್ವಹಣೆ ಸುಗಮವಾಗುತ್ತಿದೆ. ಗ್ರಾಮೀಣ ಭಾಗಗಳಲ್ಲಿ ನಷ್ಟವಿಲ್ಲದ ಉದ್ಯೋಗ ಯಾವುದಾದರೂ ಇದ್ದರೆ ಅದು ಹೈನುಗಾರಿಕೆಯಾಗಿದೆ ಎಂದು ಮಾಜಿ ಸಚಿವ ಎ.ಮಂಜು ಅವರು ತಿಳಿಸಿದರು.

ತಾಲ್ಲೂಕಿನ ಕಾಳೇನಹಳ್ಳಿ ಗ್ರಾಮದ ಸಮೀಪವಿರುವ ಟಿ.ಕೊಪ್ಪಲು ಗ್ರಾಮದಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮೀಣ ಭಾಗಗಳಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಿಸಲು, ಪ್ರತಿನಿತ್ಯ ಆರ್ಥಿಕ ಚಟುವಟಿಕೆ ಹೈನುಗಾರಿಕೆಗೆ ಸಹಾ ಯಕ. ರೈತರು ಹೈನುಗಾರಿಕೆ ಜೊತೆಗೆ ರೇಷ್ಮೆ ಕೃಷಿ ಅನುಸರಿಸಿದರೆ ಆದಾಯ ಅಧಿಕಗೊಳಿಸಿಕೊಳ್ಳಲು ಅನುಕೂಲವಾಗುತ್ತದೆಂದು ಹೇಳಿದರು.

ಹಾಸನ ಹಾಲು ಒಕ್ಕೂಟಗಳ ಜಿಲ್ಲಾ ನಿರ್ದೇಶಕ ಹೊನ್ನವಳಿ ಸತೀಶ್ ಅವರು ಮಾತನಾಡಿ, ರೈತರು ಹಸುಗಳ ಜೊತೆಗೆ ಎಮ್ಮೆಗಳನ್ನು ಅಧಿಕವಾಗಿ ಸಾಕಲು ಮುಂದಾಗಬೇಕು. ಹಾಲು ಉತ್ಪಾದಕರ ಸಂಘವನ್ನು ಉಳಿಸಿ-ಬೆಳಸಿಕೊಂಡು ಹೋಗುವುದು ಸಂಘದ ಪ್ರತಿಯೊಬ್ಬ ಸದಸ್ಯರ ಜವಾಬ್ದಾರಿ ಎಂದರು.

ಜಿಲ್ಲಾ ಹಾಲು ಒಕ್ಕೂಟದ ಅಧಿಕಾರಿ ಗಂಗಾಧರ್, ಮೋಹನ್, ಟಿ.ಕೊಪ್ಪಲು ಗ್ರಾಮದ ಉತ್ಪಾದಕ ಸಂಘದ ಅಧ್ಯಕ್ಷ, ಕಾರ್ಯದರ್ಶಿ, ಸಂಘದ ಸದಸ್ಯರು ಹಾಜರಿದ್ದರು.

## ದತ್ತಯಾತ್ರೆಗೆ ತೆರಳಿದ ದತ್ತಾ ಮಾಲಧಾರಿಗಳು

• ಪ್ರಜೋದಯ ವರದಿ


**ಬೇಲೂರು:** ಸಕಲೇಶಪುರ, ತಾಲ್ಲೂಕಿನ ಅರೇಹಳ್ಳಿ ಹಾಗು ಪಟ್ಟಣದ ದತ್ತಾ ಮಾಲ ಧಾರಿಗಳು ಜೈ ಶ್ರೀರಾಮ್ ದತ್ತಪೀಠ ನಮ್ಮದು ಎಂಬ ಭಕ್ತಿ ಘೋಷಣೆಯೊಂದಿಗೆ ಪಟ್ಟಣದ ಚನ್ನಕೇಶವ ದೇವಾಲಯದ ಮುಂಭಾಗದಲ್ಲಿ ವಿಶೇಷ ಪೂಜೆ ಸಲ್ಲಿಸಿ 50ಕ್ಕೂ ಹೆಚ್ಚು ವಾಹನಗಳಲ್ಲಿ ತೆರಳಿದರು.

ಶಾಸಕ ಹೆಚ್.ಕೆ.ಸುರೇಶ್ ಅವರು ಮಾತನಾಡಿ, ದತ್ತಮಾಲಾ ಕೇವಲ ಒಂದು ಧಾರ್ಮಿಕ ವ್ರತವಲ್ಲ, ಇದು ಶಿಸ್ತು, ತ್ಯಾಗ ಮತ್ತು ಸಂಸ್ಕಾರದ ಸಂಕೇತ. ಯುವಕರು ಇಂತಹ ವ್ರತಗಳಲ್ಲಿ ಪಾಲ್ಗೊಳ್ಳುವುದರಿಂದ ಸಮಾಜ ದಲ್ಲಿ ಶಾಂತಿ, ಸಹಕಾರ ಮತ್ತು ಮಾನವೀಯ ಮೌಲ್ಯಗಳು ಹೆಚ್ಚಾಗುತ್ತವೆ. ನಮ್ಮ ಸಂಪ್ರದಾಯ, ನಂಬಿಕೆ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಸೇತುವೆಯೇ ದತ್ತಯಾತ್ರೆ. ಸರ್ಕಾರದ ಪರವಾಗಿ ಭಕ್ತರ ಸುರಕ್ಷತೆ, ಸೌಲಭ್ಯಗಳಿಗಾಗಿ ಅಗತ್ಯಕ್ರಮಕೈಗೊಳ್ಳಲಾಗಿದೆಂದರು.

ಈಗಾಗಲೇ ಸರ್ಕಾರ ದತ್ತಪೀಠ ಹಿಂದೂಗಳ ಧರ್ಮಪೀಠ ಎಂದು ಘೋಷಣೆ ಮಾಡಿದ್ದು, ಅತಿ ಶೀಘ್ರದಲ್ಲಿ ಸಂಪೂರ್ಣವಾಗಿ ಹಿಂದೂಗಳ 2ನೇ ಅಯೋಧ್ಯೆಯಾಗುವುದು ಸನಿಹದಲ್ಲಿದೆ. ನಾನು ಸಹ ಕಳೆದ 10 ವರ್ಷಗಳಿಂದ ಒಬ್ಬ ದತ್ತಪೀಠದ ಸೇವಕನಾಗಿ ದರ್ಶನ ಮಾಡಿಕೊಂಡು ಬರುತ್ತಿದ್ದೇನೆ ಎಂದರು.

ವಿಶ್ವ ಹಿಂದೂಪರಿಷತ್ ಸಂಚಾಲಕ ನಾಗೇಶ್ ಗುಂಡ ಅವರು ಮಾತನಾಡಿ, ದತ್ತಪೀಠದ ಭಗವಾನ್ ದತ್ತಾತ್ರೇಯ ಹಿಂದೂಗಳ ಆರಾಧ್ಯ ದೈವವಾಗಿದ್ದು, ಈಗಾಗಲೇ ಸರ್ಕಾರ ಹಾಗು ನ್ಯಾಯಾಲಯ ಹಿಂದೂಗಳ ಧರ್ಮಪೀಠ ಎಂದು ಘೋಷಣೆ ಮಾಡಿದ್ದು, ಇನ್ನು ಕೆಲವು ದಿನಗಳಲ್ಲಿ ಹಿಂದೂಗಳ ಪವಿತ್ರ ಪೀಠ ಆಗುವುದರಲ್ಲಿ ಸಂದೇಹವಿಲ್ಲ ಎಂದರು.

ಬಿಜೆಪಿ ಮಂಡಲದ ಅಧ್ಯಕ್ಷ ಸಂಜಯ್ ಕೌರಿ, ಮಹಿಳಾ ಅಧ್ಯಕ್ಷರಾದ ಶೋಭ ಗಣೇಶ್, ಭರತ್ ಬಿರಡಹಳ್ಳಿ, ಅರೇಹಳ್ಳಿ ಭರತ್, ಮೋಹನ್ ಇತರರು ಇದ್ದರು.



## ಜೆರುಸಲೇಂ ಮಾಸ್ಟರ್ಸ್ ಚೆಸ್ ಪ್ರಶಸ್ತಿ | ರ‍್ಯಾಪಿಡ್ ಸುತ್ತಿನ ಪಂದ್ಯಗಳು ಡ್ರಾ

# ವಿಶ್ವನಾಥನ್ ಆನಂದ್ ವಿರುದ್ಧ ಗೆದ್ದ ಅರ್ಜುನ್‌ಗೆ ಪ್ರಶಸ್ತಿ

• ಪ್ರಜೋದಯ ವರದಿ

**ಜೆರುಸಲೇಮ್:** ಭಾರತದ ಆಟಗಾರರೇ ಇದ್ದ ಫೈನಲ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ ಅವರು ಸ್ವದೇಶದ ದಿಗ್ಗಜ ವಿಶ್ವನಾಥನ್ ಆನಂದ್ ಅವರನ್ನು ಸೋಲಿಸಿ ಜೆರುಸಲೇಂ ಮಾಸ್ಟರ್ಸ್ ಚೆಸ್ ಪ್ರಶಸ್ತಿ ಗೆದ್ದುಕೊಂಡರು.

ಇವರಿಬ್ಬರು ರ‍್ಯಾಪಿಡ್ ಸುತ್ತಿನ ಪಂದ್ಯಗಳನ್ನು ಡ್ರಾ ಮಾಡಿಕೊಂಡರು. ಬ್ಲಿಟ್ಜ್ ಸುತ್ತಿನಲ್ಲಿ ಅರ್ಜುನ್ ಬಿಳಿ ಕಾಯಿಗಳಲ್ಲಿ ಆಡಿದ ಮೊದಲ ಆಟ ಗೆದ್ದುಕೊಂಡರು. ನಂತರ 22 ವರ್ಷ ವಯಸ್ಸಿನ ತೆಲಂಗಾಣದ ಆಟಗಾರ. 2ನೇ ಆಟ ಡ್ರಾ ಮಾಡಿಕೊಂಡು ಒಟ್ಟು 2.51.5ರಿಂದ ಜಯಗಳಿಸಿದರು.

ಬುಧವಾರ ಆಡಿದ ಎರಡೂ ಪಂದ್ಯಗಳು (ಪೀಟರ್ ಸ್ವಿಡ್ಲರ್ ಮತ್ತು ಆನಂದ್ ವಿರುದ್ಧ) ಕಠಿಣವಾಗಿದ್ದವು. ನಂತರ ಆನಂದ್ ಸರ್ ವಿರುದ್ಧ ರ‍್ಯಾಪಿಡ್ ಸುತ್ತಿನಲ್ಲಿ ಇಬ್ಬರಿಗೂ ಅವಕಾಶಗಳಿದ್ದವು. ಆದರೆ ಬ್ಲಿಟ್ಜ್‌ನಲ್ಲಿ ನಾನು ಚೆನ್ನಾಗಿ ಆಡಿದೆ ಎಂದು ಅರ್ಜುನ್ ಪ್ರತಿಕ್ರಿಯಿಸಿದರು.



ಅರ್ಜುನ್ ಪ್ರಶಸ್ತಿ ಜೊತೆ 49.50 ಲಕ್ಷ ನಗದು ಬಹುಮಾನ ಜೇಬಿಗಿಳಿಸಿದರು. ಆನಂದ್ ಅವರು 31.50 ಲಕ್ಷ ಬಹುಮಾನ ಗಳಿಸಿದರು. ಅರ್ಜುನ್ ನಾಲ್ಕರ ಹಂತದ ಪಂದ್ಯದಲ್ಲಿ ರಷ್ಯದ ಪೀಟರ್ ಸ್ವಿಡ್ಲರ್ ಅವರನ್ನು ಮಣಿಸಿದರೆ, ಆನಂದ್ ಅವರು ಇನ್ನೊಂದು ಸೆಮಿಫೈನಲ್‌ನಲ್ಲಿ ವಿಶ್ವ ಬ್ಲಿಟ್ಜ್ ಚಾಂಪಿಯನ್ ರಷ್ಯಾದ ಇಯಾನ್ ನಿಪೊಮ್‌ನಿಷಿ ಅವರನ್ನು ಸೋಲಿಸಿದರು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಸ್ವಿಡ್ಲರ್ 2.51.5 ರಿಂದ ಸ್ವದೇಶದ ನಿಪೊಮ್‌ನಿಷಿ ಅವರನ್ನು ಸೋಲಿಸಿದರು. ಈ ಟೂರ್ನಿಯು 12 ಆಟಗಾರರನ್ನು ಒಳಗೊಂಡಿದ್ದು, ರೌಂಡ್‌ರಾಬಿನ್ ಮಾದರಿಯಲ್ಲಿ ನಡೆಯುತ್ತದೆ. ಮೊದಲ ನಾಲ್ಕು ಸ್ಥಾನ ಗಳಿಸಿದವರು ಸೆಮಿಫೈನಲ್ ತಲುಪುತ್ತಾರೆ.

### ಅಗ್ರ ಸ್ಥಾನ ಹಂಚಿಕೊಂಡ ಪ್ರಜ್ಞಾನಂದ



ಲಂಡನ್: ಭಾರತದ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಆರ್. ಅವರು ಕೊನೆಯ ಸುತ್ತಿನಲ್ಲಿ ಇಸ್ರೇಲ್‌ನ ಇಲ್ಯಾ ಸ್ಮಿರಿನ್ ಜೊತೆ ಡ್ರಾ ಮಾಡಿಕೊಂಡರು. ಆದರೆ ಇತರ ಇಬ್ಬರು ಆಟಗಾರರಾದ 9 ಸುತ್ತುಗಳಿಂದ ತಲಾ ಏಳು ಪಾಯಿಂಟ್ಸ್ ಗಳಿಸಿದರು. ಹೀಗಾಗಿ ಅವರು ಅಗ್ರಸ್ಥಾನ ಹಂಚಿಕೊಳ್ಳಬೇಕಾಯಿತು.

ಬುಧವಾರ ಸಂಜೆ ನಡೆದ ಅಂತಿಮ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಪ್ರಜ್ಞಾನಂದ 18 ನಡೆ ಗಳಲ್ಲಿ 2024ರ ಚಾಂಪಿಯನ್ ಸ್ಮಿರಿನ್ ಜೊತೆ ಡ್ರಾ ಮಾಡಿಕೊಂಡರು. 2ನೇ ಬೋರ್ಡ್‌ನಲ್ಲಿ ಸರ್ಬಿಯಾದ ವೆಲಿಮಿರ್ ಇವಿಕ್ ಫ್ರಾನ್ಸ್‌ನ ಮ್ಯಾಥ್ಯೂ ಕಾರ್ನೆಟೆ ಅವರನ್ನು ಸೋಲಿಸಿದರು. ಇಂಗ್ಲೆಂಡ್‌ನ ಅಮೀತ್ ಕೆ.ಘಸಿ ಅವರು ಸ್ವದೇಶದ ಡೇನಿಯಲ್ ಎಚ್.ಫೆರ್ನಾಂಡಿಸ್ ಅವರನ್ನು ಮಣಿಸಿದರು.

ಈ ಟೂರ್ನಿಯ ನಿಯಮಗಳ ಪ್ರಕಾರ ಆಟಗಾರರು ಸಮಾನ ಪಾಯಿಂಟ್ಸ್ ಗಳಿಸಿದರೆ ಸ್ಥಾನ ನಿರ್ಧಾರಕ್ಕಾಗಿ ಟೈಬ್ರೇಕರ್ ಆಡುವುದಿಲ್ಲ. ಬದಲು ಅಗ್ರಸ್ಥಾನ ಹಂಚಿಕೊಂಡು ಬಹುಮಾನ ನಿಧಿಯನ್ನೂ ಹಂಚಿಕೊಳ್ಳಲಾಗುತ್ತದೆ. ಮೊದಲ ಮೂರು ಸ್ಥಾನ ಪಡೆಯುವ ಆಟಗಾರರಿಗೆ ಕ್ರಮವಾಗಿ 12 ಲಕ್ಷ, 6 ಲಕ್ಷ ಮತ್ತು 3.60 ಲಕ್ಷ ನಿಗದಿಪಡಿಸಲಾಗಿತ್ತು.

ಕರ್ನಾಟಕದವರಾದ ಗ್ರ್ಯಾಂಡ್‌ಮಾಸ್ಟರ್ ಪ್ರಣವ್ ಆನಂದ್ (6.5) ಅವರು ನಂತರದ ಸ್ಥಾನ ಪಡೆದರು. ಇದು ಪ್ರಜ್ಞಾನಂದ ಅವರಿಗೆ ಈ ವರ್ಷ ನಾಲ್ಕನೆ ಪ್ರಶಸ್ತಿಯಾಗಿದೆ. ಓಪನ್ ಟೂರ್ನಿಯಲ್ಲಿ ಮೊದಲೆಯದು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019